# ಅಪರಂಜಿ

ಜನವರಿ
1995
ಕಿಲಿನಗೆಯ ಕಾರಂಜಿ



* ಪ್ರಕಾಶ್
* ಬಿ. ಎನ್. ನರಹರಿ
* ಶಿವು
* ಕಂಭಂ ಕೃಷ್ಣ ಮೂರ್ತಿ
* ಕೆ. ವಿ. ಶ್ರೀನಾಥ್
* ಶಿವರಾಮು ಕಾರಂತ
* ಸೀ. ಆರ್. ಸತ್ಯ
* ಪಂಡಿತ ಚಂದ್ರಕಾಂತ್
* ನಂದಿನಿ ಕಾಪಡಿ

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೨ ಜನವರಿ ೧೯೯೫ ಸಂಚಿಕೆ ೪

## ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8 ರಿಂದ
10 ಗಂಟೆಯವರೆಗೆ



ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

# ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೨ ಜನವರಿ ೧೯೯೫ ಸಂಚಿಕೆ ೪


"ನಿನ್ನ ಗುಣ ಕರ್ಮಗಳಿಂದ ನಿನ್ನ ನಾಮರೂಪಗಳನ್ನು ತಿಳಿಯಲಾಗುವುದಿಲ್ಲ, ಮನಸ್ಸಿಗೂ ಮಾತಿಗೂ ಅವು ನಿಲುಕುವುದಿಲ್ಲ, ನಿನ್ನ ದಾರಿ ಇದು ಎಂದು ಸಾಮಾನ್ಯವಾಗಿ ಊಹಿಸಬಹುದೇ ಹೊರತು ಸರಿಯಾಗಿ ತಿಳಿಯಲಾಗುವುದಿಲ್ಲ."

ಇದೇನು, ಆಧುನಿಕ ರಾಜಕಾರಣಿಯನ್ನು ಪ್ರಾರ್ಥಿಸಲು ಹೊರಟೆಯಲ್ಲಾ, ಅಪರಂಜಿ, ಎಂದು ಕೇಳಬೇಡಿ.

ಇದು ಪ್ರಾರ್ಥನೆ ಮಾಡಲು ಸರಿಯಾದ ಕಾಲ, ವರ್ಷವೊಂದು ಕಳೆದು ಮತ್ತೊಂದು ಕಾಲಿಡುತ್ತಿದೆ. ಶುಭವನ್ನು ಲೋಕಕ್ಕೆ ಹಾರೈಸುವುದೇ ಅಪರಂಜಿಯ ವ್ರತ.

ವಾಸ್ತವಗಳನ್ನು ಮರೆಯುವುದು ಅವಳಿಗೆ ತಿಳಿಯದು. ಆದುದರಿಂದಲೇ ಅವಳು ಪ್ರಾರ್ಥಿಸುತ್ತಿದ್ದಾಳೆ.

ಯಾರನ್ನು ಪ್ರಾರ್ಥಿಸುವೆ ? ದೇವರಿಲ್ಲವಲ್ಲಾ ಇದ್ದರೆ ಕಾಣಿಸಬೇಕಿತ್ತಲ್ಲಾ ಎಂದು ಸೂಡೋವೈಜ್ಞಾನಿಕ ಮನೋಭಾವದ ಹರಿಕಾರರು ಕೇಳುತ್ತಾರೆ. ಕಂಡದ್ದು ದೇವರಲ್ಲ, ಎಲ್ಲವನ್ನು ಕಾಣುವುದು ದೇವರು.

ಆದುದರಿಂದ ಅಪರಂಜಿಯು ಸರ್ವಸಾಕ್ಷಿಯಾದ ಆ ಚೈತನ್ಯವನ್ನು ಪ್ರಾರ್ಥಿಸುತ್ತಾಳೆ.

ಅಪರಂಜಿ ಸುಳ್ಳು ಹೇಳುವುದಿಲ್ಲ. ಬರಹದ ಮೊದಲಲ್ಲಿ ಕಂಡು ಬರುವ ಪ್ರಾರ್ಥನೆ ಬ್ರಹ್ಮಾದಿದೇವತೆಗಳು ದೇವಕೀದೇವಿಯ ಗರ್ಭದಲ್ಲಿದ್ದ ಶ್ರೀಕೃಷ್ಣನನ್ನು ಕುರಿತು ಮಾಡಿದ್ದು

ಅಂತಹವನು ಅವತರಿಸಲು ಇದು ಸಕಾಲವಲ್ಲವೇ ?




ಪ್ರಕಾಶ್

ಐ. ಎಸ್. ಆರ್. ಓ. ಬೇಹುಗಾರಿಕೆ  ಹಗರಣ; ನಂಬಿ ನಾರಾಯಣನ್ ಬಂಧನ

-ಸುದ್ದಿ

ಅವರನ್ನ ನಂಬಬಾರದಾಗಿತ್ತು ! !

*   *   *

'ಈ ಹಗರಣದಿಂದ, ಕ್ಷಿಪಣಿ ಹಾರಿಸಿದ ಉತ್ಸಾಹ ಧರೆಗಿಳಿಯಿತು' ಅಂತ ಅಪರಂಜಿ ನಕ್ಕಳಂತೆ !

*   *   *   *

' ನಾನು ಆದಿಶೇಷನ್, ಮಧ್ಯ ಶೇಷನ್, ಅಂತ್ಯ ಶೇಷನ್ ! '

– ಜಾಫರ್ ಶರೀಫರ ಪ್ರಶ್ನೆಗೆ ಉತ್ತರ;

ಕಡೆಯ ಮಾತು ನಿಜವಾಗದಿರಲಿ !

*   *   *

ರಾಮನೇ ಸರ್ಕಾರ ರಚಿಸಿದರೂ ಭಿನ್ನ ಮತ ಎದುರಿಸ ಬೇಕು

ಭಜನ್‌ಲಾಲ್

ರಾಮ, ರಾಮ ! !

ಪಾಠ ಕಲಿಸಿದ ಮತದಾರ

– ಚುನಾವಣೆ ಸುದ್ದಿ

ಆದರೆ ಪಾಠ ಕಲಿತವರು ಅಧಿಕಾರದಲ್ಲಿರುವುದಿಲ್ಲವಲ್ಲ ? ? ?

* * *

ಜನತಾದಳದ ಗಾಲಿಯ ಓಟ ಶ್ರೀ ಸಾಮಾನ್ಯನ ಆಸೆ–ಆಕಾಂಕ್ಷೆಗಳನ್ನು ಚಿಂದಿ ಮಾಡದಿರಲಿ !

* * * *

ರಾಜ್ಯದಲ್ಲಿ ಒಣ ಹವೆ–

ಎಲೆಕ್ಷನ್ ಸುದ್ದೀನ ಹೀಗೆ ಹಾಕಬಾರದು !

* * * *

ಚುನಾವಣೆ ಫಲಿತಾಂಶ ; ಆರ್ಥಿಕ ಸುಧಾರಣೆಗೆ ಧಕ್ಕೆ ಇಲ್ಲ

– ದೆಹಲಿ ಹೇಳಿಕೆ

ಜಟ್ಟಿ ಬಿದ್ದರೂ.........! !

* * *

ಸಿಕ್ಕಿಂನಲ್ಲೂ ಕಾಂಗ್ರೆಗೆ ಏನೂ ಸಿಕ್ಕಲಿಲ್ಲವಂತೆ ! !

* • * *

# "ಸೆಮಿನಾರ್ ವೈರಸ್"

**ಬಿ. ಎನ್. ಸಹರಿ**

**ಗೋ**ಪಿನಾಥ್ ಎಂ. ಇ. ವರ್ಕರ್ಸ್‌ಗೆ ತಪ್ಪದೆ ಟ್ವೆಂಟಿ ಪರ್ಸೆಂಟ್ ಬೋನಸ್. ಷೇರ್ ಹೋಲ್ಡರ್ಸ್‌ಗೆ ಒಂದು ವರ್ಷನಾಮ, ಇನ್ನೊಂದು ವರ್ಷ ಶೇ 4 ಪ್ಲಸ್ ಜನರಲ್ ಬಾಡಿಮೀಟಿಂಗ್‌ಲಿ ಅಂಗೈಯಗಲದ ಹೊದಿಕೆ ಸೇರಿ 64ಪುಟ ನೋಟ್ ಬುಕ್ ಕೊಡುತ್ತಿದ್ದ ಪೆರಿ ಹೆವಿ ಜಾಯಿಂಟ್ ಸೆಕ್ಟರ್ ಕಾರ್ಖಾನೆಯಲ್ಲಿ ಚೀಫ್ ಪ್ರೊಡಕ್ಷನ್ ಮ್ಯಾನೇಜರ್, ಮೆಚ್ಚಿನ ಮಡದಿ ಮಿನಾ, 1+1 ಮುದ್ದು ಮಕ್ಕಳು ಮತ್ತು 20ನೇ ಶತಮಾನದಲ್ಲಿ ತಂದೆ ತಾಯಿ ಜೊತೆಯಲ್ಲಿದ್ದರೂ ಸಂತೋಷವಾಗಿದ್ದ · ವಯಸ್ಸಾದ ಹಿರಿಯರು, ಸಂಪ್ರದಾಯಸ್ಥ ಕುಟುಂಬ.

ನಿತ್ಯ ಮೀನಳದೇ ಅಡಿಗೆ. "ಆ ಕಷ್ಟದ ದಿನಗಳಲ್ಲಿ" ಮಾತ್ರ ಮಾಡ್ತಿರಲಿಲ್ಲ, ಹಿರಿಯರು ನೊಂದಾರು ಅಂತ. ಆವಾಗ ಗೋಪಿಗೆ "ಸೆಮಿನಾರ್ ದಿನಗಳು".

"ಇಂದಿನಿಂದ 4 ದಿನ ಹೊರಗೆ ಊಟ ಮಾಡ್ಕೋತೀನಿ, ಕ್ಯಾರಿಯರ್ ಬೇಡ" ಎಂದು ಹೇಳಿ ಫ್ಯಾಕ್ಟರಿಗೆ ಹೋದವನು ಶಾಕ್ ಹೋಟೆಲಿನಲ್ಲಿದ್ದ "ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್ ಇನ್ ಟ್ವೆಂಟಿ ಸೆಕೆಂಡ್ ಸೆಂಚುರಿ" 3ದಿನಗಳ ಸೆಮಿನಾರ್‌ಗೆ ಆಪ್ತ ಮ್ಯಾನೇಜರ್ ಹೆಸರಿನ ಜೊತೆ ತನ್ನದೂ ಹಾಕ್ಕೊಂಡು ನೋಟ್‌ನ ಅಪ್‌ಮಾಡಿ ಥ್ರೂ ಡಿ. ಜಿ. ಎಂ. ಎ. ಜಿ. ಎಂ ನ ಒಪ್ಪಿಸಿ ಫೈನಾನ್ಸ್ ವಿಭಾಗಕ್ಕೆ ಕಾಪಿ ತಳ್ಳಿ ನೇರ ಹೋಟೆಲಿಗೆ ಹೋದ, ಬೆಳಿಗ್ಗೆ ಕಾಫಿ ಬ್ರೇಕ್‌ಸಮಯಕ್ಕೆ.

ಮೊದಲನೆ ದಿನ. ಗೋಪಿಗೆ "ಊಟ, ವಿಷಯ, ಭಾಷಣಕಾರರು, ಸೆಮಿನಾರ್ಥಿಗಳು, ಎಲ್ಲ ಸೊಗಸು" ಎಂದೆನಿಸಿತು. ಎರಡನೆ ದಿನ. "ವಿಷಯಕ್ಕೂ ತನ್ನ ಕೆಲಸಕ್ಕೂ ಸಂಬಂಧವಿಲ್ಲ" ಎನ್ನೊ ಭಾವನೆ. ಸ್ವಲ್ಪ ಹೊಟ್ಟೆ ನೋವು ಶುರುವಾಗಿ ಬಫೆಲಿ ಜಾಮೂನ್, ಐಸ್ ಕ್ರಿಂ ಕಡಿಮೆ ತಿಂದ. ಮೂರನೆ ದಿನ, "ಸಿಲ್ಲಿ ಲೆಕ್ಚರ್ಸ್" ಅಂತ ಅಭಿಪ್ರಾಯ ಬೇರೂರಿತು. ಮಿತವಾಗಿ ಬಫೆ ಮುಗಿಸಿದಾಗ ಬೊಕ್ಕತಲೆ ನೋವು, ಟೈರ್ ಹೊಟ್ಟೆ ಉರಿ ಬಂದು ವಾಂತಿ ಆಗೋ ಹಾಗೆ ಆಯ್ತು. ಸೆಮಿನಾರ್ ಸ್ಕಿಪ್ ಮಾಡಿ ಸೀದ ಆಸ್ಪತ್ರೆಗೆ ಕಂಪ್ನಿಕಾರ್‌ಲಿ ಹೋದ.

ಎಮರ್ಜೆನ್ಸಿ ವಾರ್ಡಿನಲ್ಲಿ ಮಲಗಿಸಿದರು. ಸೀನಿಯರ್ ವೈದ್ಯರೇ ಬಂದು "ಬೆಳಿಗ್ಗೆ ಎಲ್ಲಿದ್ದಿರಿ, ಏನು ತಿಂದಿರಿ, ಕುಡಿದಿರಿ ?" ಎಂದರು.

ಶಾಕ್ ಹೋಟೇಲ್‌ನಲ್ಲಿ ಸೆಮಿನಾರ್. ಇವತ್ತು 3ನೆ ದಿನ. ಹೊಟ್ಟೇಲಿ ಸಂಕಟವಾಗ್ತಿತ್ತು. ತೆಳು ರಸಂ, ತಿಳಿಮಜ್ಜಿಗೆ ಮಾತ್ರ ತೊಗೊಂಡೆ ಎಂದ ಗೋಪಿ ಡಾಕ್ಟರು" ಸಿಲ್ಲಿ ! ಚಿಕನ್, ಫಿಶ್ ಇತ್ಯಾದಿ ಇರಲಿಲ್ವೆ. ಬರಿ ಸಾರನ್ನ, ತಿಳಿಮಜ್ಜಿಗೆಗೆ ಸೆಮಿನಾರ್ ಅಂತ ಶಾಕ್‌ಗೆ ಹೊಗ್ತಾರೇನ್ರಿ, ಉಡುಪಿ ಹೋಟೆಲ್ ಸಾಕು" ಎಂದು ನಾಡಿಮಿಡಿತ, ಹೃದಯದ ಹೊಡೆತ ತಪಾಸಣೆ ಮಾಡ್ತಿದ್ದಾಗ, ಬಂತು ಬ್ಲಡ್ ರಿಪೋರ್ಟ್, ಅದನ್ನು ನೋಡಿ "ವೈರಸ್ ಎಫೆಕ್ಟ್ ಪಾಸಿಟಿವ್" ಎಂದರು ಡಾಕ್ಟರು ಸೀರಿಯಸ್ಸಾಗಿ.

ಗೋಪಿ ಗಾಬರಿಯಾದ. "ಯಾವ ವೈರಸ್ ಸಾರ್" ಎಂದ "ಸೆಮಿನಾರ್ ವೈರಸ್. ಬಗ್ ಕಚ್ಚಿ ವೈರಸ್ ರಕ್ತದಲ್ಲಿಯ ಸೇರ್‍ತಿದೆ. ವರಿ ಮಾಡ್ಕೊಬೇಡಿ ನಿಮ ಗೊಬ್ಬರಿಗೇ ಅಲ್ಲ. ಇದು ಏಯ್ಡ್ಸ್‌ಗಿಂತ ವೇಗವಾಗಿ ಇಡೀ ದೇಶದಲ್ಲಿ ಹರಡ್ತಿದೆ. ಮಂತ್ರಿ, ಎಂಪಿ, ಎಂ. ಎಲ್. ಎ. ಮಹೋದರರು ಅಜ್ಞಾನಿ, ವಿಜ್ಞಾನಿ, ಬ್ಯುರೋ ಕ್ರಾಟ್, ಟೆಕ್ನೊಕ್ರಾಟ್ಸ್, ಡೆಮೊಕ್ರಾಟ್ಸ್ ಮ್ಯಾನೇಜ್‌ಮೆಂಟ್ ವರ್ಕರ್ಸ್, ಲೇಬರ್ ಯೂನಿಯನ್‌ಆಫೀಸರ್ಸ್ ಇತ್ಯಾದಿ, ಇತ್ಯಾದಿ ಲಿಂಗ ಬೇಧವಿಲ್ಲದೆ ಎಲ್ಲರಿಗೂ ವೈರಸ್ ರಕ್ತಗತವಾಗ್ತಿದೆ" ಎಂದು ನಕಲಿ ಡಾಕ್ಟರ್ ಶ್ಯಾಮ್ ಭಾಷಣ ಬಿಗಿದರು. ಸೆಮಿನಾರ್ ಸ್ಟೈಲಿನಲ್ಲಿ.

"ಚಿಹ್ನೆಗಳು ? ಚಿಕಿತ್ಸೆ ? ಸಾರ್" ಎಂದಾಗ ಗೋಪಿ, ಮುಂದುವರಿಯಿತು ಭಾಷಣ, ದಿನ ಒಂದು, ತುಂಬಾ ಉತ್ಸಾಹ, ಹಸಿವು ಹೆಚ್ಚು, ತಿನ್ನಾಟ ಜಾಸ್ತಿ ದಿನ ಎರಡು, ಸ್ವಲ್ಪ ಹೊಟ್ಟೆನೋವು, ತಲೆ ನೋವು ಮೂರನೆದಿನ, ಕ್ಯಾರಿಓವರ್ ನೋವು ಗಳು ಪ್ಲಸ್ ವಾಂತಿಯ ಭ್ರಾಂತಿ. ಹೀಗೆ ಸೆಮಿನಾರ್ ದಿನಗಳಲ್ಲಿ. ಚಿಕಿತ್ಸೆ ಸಾಧ್ಯ. ಪೂರ್ಣಗುಣ ಆಗಲ್ಲ, ತಾತ್ಕಾಲಿಕ ಶಮನ ಮಾತ್ರ. ಲಸಿಕೆ ಇಲ್ಲ. ಈ ವೈರಸ್‌ಗೆ ಒಂದೇ ಮದ್ದು, ಮತ್ತೊಂದು ಸಮಿನಾರ್ ಕ್ಯಾಪ್ಸೂಲ್ 'ಉಷ್ಣಂ ಉಷ್ಣೇನ ಶಮನಂ ಅಂತಾರಲ್ಲ ಹಾಗೆ, ಬೇರೆ ಊರುಗಳಲ್ಲಿ, ಪಂಚತಾರಾ ಹೋಟೆಲಿನಲ್ಲಿದ್ದರೆ ಉತ್ತಮ. ತಿಂಗಳಿಗೆ 4 ದಿನಗಳಾದರೂ ಸೆಮಿನಾರ್ಥಿಯಾಗಿ ಬಫೆ ಊಟ ಮಾಡಬೇಕು"

"ಫ್ಯಾಕ್ಟರಿ ಗತಿ" ಎಂದು ಪೆದ್ದು ಪೆದ್ದಾಗಿ ಗೋಪಿ.

"ಅಸಿಸ್ಟೆಂಟ್ಸ್ ಇಲ್ಲವೆ ? ನೀವೆ ಕೆಲ್ಸಮಾಡ್ತಿದ್ದರೆ ನಾಲಾಯಖ್ ಮ್ಯಾನೇಜರ್ ಅಂತಾರೆ ಅಷ್ಟೆ. ಕಲಿತಿದ್ದು ಮರೆಯುಕ್ಕೆ. ಕಲಿಯಬಾರದ್ದು ಕಲಿಯುಕ್ಕೆ, ಕಣ್‌ಬಿಟ್ಟು ನಿದ್ರಿಸಕ್ಕೆ ಪ್ರಶಸ್ತವಾದ ಸುವ್ಯವಸ್ಥೆ ಎಂದರೆ ಸೆಮಿನಾರ್‌ಗಳು. ಬಿಡದೆ ಹೋಗಿ" ಎಂದ ಡಾಕ್ಟರು ಪ್ರಿಸ್ಕ್ರಿಪ್‌ಷನ್ ಕೊಟ್ಟರು. "ಈಗ ತಕ್ಷಣಕ್ಕೆ ನಮ್ಮದೇ 3 ದಿನಗಳ ಸೆಮಿನಾರ್, ಸೋಮವಾರದಿಂದ, ಟಾಪಿಕ್, ಸೆಮಿನಾರ್ ವೈರಸ್ ಇನ್ ಸೀನಿಯರ್ ಮ್ಯಾನೇಜರ್ ' ಹೋಟೆಲ್ ಭೀಮಾಲಿ ಇದೆ. ತಕ್ಷಣ ನಾಮಿನೇಶನ್ ಕಳುಹಿಸಿ, "ಫಾರಂನಲ್ಲಿ ಕಮ್ಮಿಟಿ ಅಂತ ಬರೀಬೇಡಿ, ಸೆಮಿನಾರ್ ಅಂತ ಕನ್ನಡದಲ್ಲಿ ಹಾಕಿ".

ಆಸ್ಪತ್ರೆಯಿಂದಲೆ "ನಂದೂ, ಡಿ, ಜಿ. ಎಂ ಹೆಸರು ಟೈಪ್‌ಮಾಡಿ ಪುಟ್‌ಅಪ್ ಮಾಡು" ಎಂದು ಪಿ. ಎಗೆ ಫೋನ್ ಮಾಡಿ ಎಂದಿನ ಟೈಮಿಗೇ ಮನೆಗೆ ಹೋದ ಗೋಪಿ, ಎಂ ಟಿ ಆರ್ ಲಿ ಬಾದಾಮಿ ಹಲ್ವ ರವೆ ಇಡ್ಲಿ ಪಾರ್ಸೆಲ್ ತೊಗೊಂಡು.

# ಎಕ್ಕೀ ಮತ್ತು ಗಿಟ್ವಾ

**ಶಿವು**

ಶ್ರೀರಾಮ ಚಂದ್ರ ಬಹು ಜಾಣತನದಿಂದ ರಾಜ್ಯಭಾರದ ತಲೆನೋವನ್ನೆಲ್ಲಾ ತನ್ನ ತಮ್ಮನಿಗೆ ಒಪ್ಪಿಸಿ, ತನ್ನ ಪಾಡಿಗೆ ತಾನು ಹಾಯಾಗಿ ಕಾಡಿಗೆ ಹೊರಟಂತೆ, ನನ್ನ ತಮ್ಮನೂ ತನ್ನ ವಹಿವಾಟನ್ನೆಲ್ಲಾ ನನಗೆ ಒಪ್ಪಿಸಿ ಅಮೆರಿಕೆಗೆ ತೆರಳಿದ್ದ. ಆ ಭಾದ್ಯತೆಯ ಒಂದು ಅಂಶವಾಗಿ ನಾನು ಮೊನ್ನೆ ವರಮಾನತೆರಿಗೆ ಕಛೇರಿಗೆ ಅಲೆದಾಡಬೇಕಾಯಿತು. ತೆರಿಗೆ ಅಧಿಕಾರಿಯನ್ನು ಬೇಗ ಭೆಟ್ಟಿಮಾಡಿ ಅರ್ಧಘಂಟೆಯಲ್ಲೇ ಕೆಲಸ ಕೆಲಸ ಮುಗಿಸಿಕೊಂಡು. ನನ್ನ ಗಾಣಕ್ಕೆ ತೆರಳುವ ಸದುದ್ದೇಶದಿಂದ ಬೆಳಗ್ಗೆ ಹತ್ತುಗೆಲ್ಲಾ ಆಫೀಸರ ಬಾಗಿಲ ಮುಂದೆ ನಿಂತಿದ್ದೆ. ಆಫೀಸರ್ ಇನ್ನೂ ಬಂದಿರಲಿಲ್ಲ. ಅಷ್ಟರಲ್ಲಿ ಇನ್ನೊಂದು ವ್ಯಕ್ತಿ ಬಂದು ಅಲ್ಲೇ ಹತ್ತಿರದಲ್ಲಿದ್ದ ಕುರ್ಚಿಯ ಮೇಲೆ ಠೀವಿಯಿಂದ ಕುಳಿತುಕೊಂಡಿತು. ತಲೆಗೆ ಜರಿಪೇಟ, ಕತ್ತಿನ ಮೇಲೆ ಊದಾ ಬಣ್ಣದ ಶಲ್ಯ, ಸಿಲ್ಕ್ ಜುಬ್ಬ, ಕೆಂಪು ರೇಷ್ಮೆ ಕಚ್ಚೆ ಪಂಚೆ, ಹಣೆಯಮೇಲೆ ಕಾಸಿನಗಲದ ಕುಂಕುಮ ಈ ವಿಚಿತ್ರಪ್ರಾಣಿಗೆ ಇಲ್ಲೇನು ಕೆಲಸ ಅಂದುಕೊಳ್ಳುತ್ತಿರುವಾಗಲೇ, ಆಫೀಸರ್ ಹಾಜರಾದ. ಬಹು ಭಯ ಭಕ್ತಿಗಳಿಂದ ಆ ಕುಂಕುಮದ ಆಸಾಮಿಯನ್ನು ಒಳಕ್ಕೆ ಕರೆದುಕೊಂಡು ಹೋದ. ಬಾಗಿಲು ಮುಚ್ಚಿಕೊಂಡಿತು, ಹಿಂದಿನ ದಿನ ನನಗೆ ಭೇಟಿಯವೇಳೆ ಕೊಟ್ಟಿದ್ದನ್ನು ಆ ಆಫೀಸರ್ ಪೂರ್ತಿ ಮರೆತಂತಿದ್ದಿತು. ಅರ್ಧಘಂಟೆ ಆದರೂ ಆಫೀಸಿನ ಬಾಗಿಲು ತೆಗೆಯಲೇ ಇಲ್ಲ, ನಾನು ಸಹನೆ ಮೀರಿ ಚಡಪಡಿಸುತ್ತಿದ್ದುದನ್ನು ನೋಡಿ ಅಲ್ಲಿ ನಿಂತಿದ್ದ 'ಪೀವನ್'ಗೆ ಕರುಣೆ ಮೂಡಿತು. ಅವ ನನ್ನನ್ನು ಬಾಗಿಲ ಮುಂದೆ ಸರಿಯಾಗಿ ನಿಲ್ಲುವಂತೆ ಹೇಳಿ ಆಫೀಸಿನ ಬಾಗಿಲನ್ನು ಜೋರಾಗಿ ತೆಗೆದ, ಒಳಗೆ ಆಫೀಸರ ಮುಂದಿನ ಕುರ್ಚಿಯಲ್ಲಿ ಆ ಕುಂಕುಮ ಧಾರಿ ಕುಳಿತು, ಹಸಿರು ಹಾಸಿನ ಮೇಜಿನ ಮೇಜೀನ ಮೇಲೆ ಚಾಚಿದ್ದ ಬಲಗೈ ಅನ್ನು ಹಿಡಿದು ಆಫೀಸರಿಗೆ ಹಸ್ತ ಸಾಮುದ್ರಿಕ ಹೇಳುತ್ತಿದ್ದ. ಬಾಗಿಲೂ ತೆರೆದದ್ದು ನೋಡಿ ಆಫೀಸರ್ ಈ ಕಡೆ ತಿರುಗಿದ.

"ಓ ! ನೀವಿನ್ನೂ ಇಲ್ಲೇ ಇದ್ದೀರಾ, ಬನ್ನಿ ಒಳಗೆ" ಅಂತ ವಿಶ್ವಾಸದಿಂದ ಒಳಕ್ಕೆ ಕರೆದ. ನಾನು ಒಳಗೆ ಹೋಗಿ ಕೂತೆ. ಹಸ್ತಸಾಮುದ್ರಿಕದ ಚೆಲ್ಲಾಟ ಮುಗಿದಾಗ

ಹನ್ನೆರಡೂ ಕಾಲು. ಜ್ಯೋತಿಷಿ ಏಳುತ್ತಿದ್ದಂತೆ, ಆಫೀಸರೂ ಎದ್ದ. "ನೋಡಿ, ನನ್ನ ಕೊಲೀಗ್ ಒಬ್ಬರ ಗೃಹ ಪ್ರವೇಶ ಇದೆ. ಊಟಕ್ಕೆ ಹೋಗಬೇಕು. ನೀವು ಸರಿಯಾಗಿ ಎರಡು ಘಂಟೆಗೆ ಬಂದು ಬಿಡಿ, ಮಾತನಾಡೋಣ" ಅಂತ ಹೇಳಿ ಆ ಜ್ಯೋತಿಷಿ ಹಿಂದೆ ನಡೀತಿದ್ದ. ದಿಗ್ಭ್ರಮೆಯಿಂದ ನಾನು ಆಫೀಸಿನಿಂದ ಹೊರಕ್ಕೆ ಬಂದೆ.

ಡಿಸೆಂಬರ್ ಛಳಿಯಲ್ಲಿ ಹಿತವಾಗಿದ್ದ ಮಧ್ಯಾಹ್ನದ ಬಿಸಿಲಿಗೆ ಮೈಯೊಡ್ಡಿ ವರಮಾನ ತೆರಿಗೆ ಕಛೇರಿಯಿಂದ, ಎಂ ಜಿ. ರೋಡ್ ಕಡಗೆ ಒಂದು ವ್ಯಕ್ತಿ ನಡೆದು ಹೋಗುತ್ತಿತ್ತು. ತಲೆ ತಗ್ಗಿಸಿ ನಡೆಯುತ್ತಿದ್ದ ಆವ್ಯಕ್ತಿಯ ಮುಖ ಹೊರನೋಟಕ್ಕೆ ಶಾಂತವಾಗಿ ಕಂಡರೂ, ಒಳಗಿನ ಭಾವನೆಗಳ ಭುಗಿಲು, ಹೊರಗಿನ ಬಿಸಿಲಿಗೆ ಸರಿಸಾಟಿಯಾಗಿತ್ತು. ಈ ದರಿದ್ರ ದೇಶದಲ್ಲಿ ಮಾತ್ರ ಇಂತಹ ಸಂಗತಿಗಳು ನಡೆಯಲು ಸಾಧ್ಯ ಎಂಬ ಶೀರ್ಷಿಕೆಯಡಿಯಲ್ಲಿ ಆ ವ್ಯಕ್ತಿಯ ವ್ಯಗ್ರ ಮನಸ್ಸು ಒಂದು ಪ್ರಬಂಧ ರಚಿಸಲು ಹೆಣಗುತ್ತಿತ್ತು. ಆಫೀಸರ ಬೇಜವಾಬ್ದಾರಿತನದ ಬಗ್ಗೆ ಮೂಡುತ್ತಿದ್ದ ಕೋಪದ ಭಾವನೆಗಳು, ಆ ಕುಂಕುಮ ಧಾರಿಯ ವ್ಯಾವಹಾರಿಕ ಜಾಣ್ಮೆಯ ಮೆಚ್ಚುಗೆಯಲ್ಲಿ ಕರಗಿಹೋಗುತ್ತಿದ್ದವು. ಆಫೀಸರು, ಜ್ಯೋತಿಷಿ ಇವರಿಬ್ಬರೂ ಅಂದು ಬೆಳಗ್ಗೆ ಪ್ರದರ್ಶಿಸಿದ ನಿರಾತಂಕ ಜೀವನೋತ್ಸಾಹದ ಒಂದು ಅಂಶವಾದರೂ ತನಗೆ ಇರುವಂತಾಗಿದ್ದರೆ, ಎಷ್ಟು ಚೆನ್ನ ಎಂಬ ಅಸೂಯೆಯೂ ಆಗಾಗ ತಲೆಹಾಕಿ, ಪ್ರಬಂಧದ ಮೂಲ ಉದ್ದೇಶವನ್ನೇ ಕೆಡಿಸುವುದರಲ್ಲಿ ಸಾಕಷ್ಟು ಸಫಲವಾಗಿತ್ತು. ಭಾವನಾತರಂಗಗಳ ಗುಂಗಿನಿಂದ ನಾನು ಆಚೆ ಬಂದಾಗ, ಎಂ. ಜಿ. ರೋಡಿನಲ್ಲಿ ನಡೆಯುತ್ತಿದ್ದೆ. ಪಕ್ಕದಲ್ಲೇ ಇಂಡಿಯಾ ಕಾಫಿ ಹೌಸ್ ಇತ್ತು. ಒಳಗೆ ನುಗ್ಗಿ ಕಾಫಿ ಹೀರುತ್ತಾ ಕುಳಿತಾಗ ಎದುರು ಗೋಡೆಯ ಮೇಲೆ FLY SWISSAIR ಎಂಬ ಪೋಸ್ಟರ್ ಕಾಣಿಸಿತು. ನೆನಪು ಸ್ವಿಸ್‌ದೇಶ ದತ್ತ ಹರಿಯಿತು.

What a Contrast ! ದಶಕಗಳ ಹಿಂದೆ, ಡವೋಸ್‌ನ ಸ್ವಿಸ್ ಬ್ಯಾಂಕ್ ಒಂದರಲ್ಲಿ ನನಗಾದ ಅನುಭವ ಒಮ್ಮೆಲೇ ನಿಚ್ಚಳವಾಗಿ ನೆನಪಿಗೆ ಬಂತು. ಆಗ ನಾನಿನ್ನೂ ವಿದ್ಯಾರ್ಥಿ, ಇಂಗ್ಲೆಂಡಿನಿಂದ ಎಕಾನಮಿ ಬಡ್ಜೆಟ್‌ನಲ್ಲಿ ಯೂರೋಪ್ ಪ್ರವಾಸ ಕೈಗೊಂಡು ಡವೋಸ್ ಸೇರಿದ್ದೆ. ಥಾಮಸ್ ಕುಕ್ ಕಂಪನಿಯವರು ಏರ್ಪಡಿಸಿದ್ದ ಒಂದು ವಾರದ ಪ್ರವಾಸ ಅದು. ಡವೋಸ್‌ನಲ್ಲಿದ್ದಾಗ ಹಣ ಸ್ವಲ್ಪ ಕಡಿಮೆ ಬಂತು.

ಇಂಗ್ಲೆಂಡಿನಲ್ಲಿದ್ದ ಖಾತೆಯಿಂದ. ಇಲ್ಲಿ ಹೇಗೆ ಹಣಪಡೆಯುವುದು ಎಂದು ಯೋಚಿಸುತ್ತಿದ್ದಾಗ ಜೊತೆಯಲ್ಲಿದ್ದ ಹಾರ್ವೆ, "ಸ್ವಿಸ್ ಬ್ಯಾಂಕ್‌ನಲ್ಲಿ ಕೇಳು" ಅಂತ ಸಲಹೆ ನೀಡಿದ. ಹತ್ತಿರದಲ್ಲಿದ್ದ ಕ್ಯಾಂಟೊನಾಲ್ ಬ್ಯಾಂಕ್‌ಗೆ ಹೋಗಿ ಪರಿಸ್ಥಿತಿ ವಿವರಿಸಿದಾಗ ನನ್ನ ಪಾಸ್‌ಪೋರ್ಟ್, ಖಾತೆಯ ವಿವರ ಪಡೆದು "ಒಂದು ಹತ್ತು ನಿಮಿಷಕಾಯಲು ಸಾಧ್ಯವೇ?" ಅಂತ ಸೌಜನ್ಯದಿಂದ ಕೇಳಿ ಕೂರಿಸಿದರು. ಹತ್ತು ನಿಮಿಷಕ್ಕೆ ಮುಂಚೆಯೇ ಬೇಕಾದ ಹಣ ನನ್ನ ಕೈ ಸೇರಿತ್ತು. ಇಲ್ಲಿನ ಜನಗಳ ದಕ್ಷತೆ, ಪರಸ್ಪರ ನಂಬಿಕೆ. ಇವೆಲ್ಲಾ ನನಗೆ ಹೊಸದು. ಹೆಜ್ಜೆಗೆ ಹತ್ತು ಬಾರಿ ಸಂಶಯ ಪಡುತ್ತಾ, ಸ್ವೀಕರಿಸಿದ ಲಂಚದಿಂದ ಸಂಶಯ ಪರಿಹಾರ ಮಾಡಿಕೊಳ್ಳುವ ನಮ್ಮ ಅಧಿಕಾರಿಗಳ ಸಂಪ್ರದಾಯಕ್ಕೂ ಇಲ್ಲಿನ ನಡವಳಿಕೆಗೂ ಎಷ್ಟು ಅಂತರ ಎನ್ನಿಸಿತು.

ಹಣ ಪಡೆದು ಬ್ಯಾಂಕ್‌ನಿಂದ ಹೊರಕ್ಕೆ ಬಂದಾಗ, ದೂರದ ಹಚ್ಚ ಹಸಿರಿನ ಕಣಿವೆಗಳನ್ನು ನೋಡುತ್ತಾ ಹಾರ್ವೆ ನಿಂತಿದ್ದ. ಹಾರ್ವೆ ಕೆನಡಾದ ತರುಣ, ಸಂಗೀತದ ವಿದ್ಯಾರ್ಥಿ. ನನ್ನಂತೆಯೇ ಲೋ ಬಡ್ಜೆಟ್ ಪ್ರವಾಸಿಗ. ಬಸ್ಸಿನಲ್ಲಿ ನಾವಿಬ್ಬರೇ ತರುಣರು ಮಿಕ್ಕವರೆಲ್ಲಾ ಇಳಿ ವಯಸ್ಸು ದಾಟಿದವರು. ಹಾಗಾಗಿ ಸಹಜವಾಗಿಯೇ ನಾವಿಬ್ಬರೂ ಒಬ್ಬರಿಗೊಬ್ಬರು ಜೊತೆಯಾಗಿದ್ದೆವು. ಹಾರ್ವೆಯೊಡನೆ ಮಾತನಾಡುವುದೆಂದರೆ ಅದೊಂದು ಮೋಜು. ಒಮ್ಮೆ ನಮ್ಮ ಮಾತುಕತೆ ಜೀವಸೃಷ್ಟಿಯ ಕಡೆ ತಿರುಗಿತು.

"ಡಾರ್ವಿನ್ನನ ವಿಕಾಸವಾದವೆಲ್ಲಾ ಬರೀ ಸರಬುರುಡೆ. ಜೀವಿಗಳು ಪರಿಸರಕ್ಕೆ ಪರಿಭಾವಿಸಿ, ಕಾಲಕ್ರಮೇಣ ಬದಲಾವಣೆ ಹೊಂದುವುವಂತೆ. ಎಲ್ಲಾ bull shit ಹಾಗಾದರೆ ಜೀವಿಗಳಲ್ಲಿ ಕಣ್ಣು ಹೇಗೆ ಮೂಡಿತು ? ಪರಿಸರದಲ್ಲಿ ಯಾವ ಕ್ಯಾಬರೆ ನಡೀತಿತ್ತು ಅಂತ ಜೀವಿಗಳಿಗೆ ಅದನ್ನು ನೋಡಬೇಕೆಂಬ ಉತ್ಕಟ ಇಚ್ಛೆ ಮೂಡಿ, ರೆಟಿನ, ಕಾರ್ನಿಯ ಎಲ್ಲವನ್ನು ಒಟ್ಟಿಗೇ ಸೃಷ್ಟಿಸಿಕೊಂಡವು ಹೇಳು ಶಿವ ? ಆಡಮ್ ಈವ್ ಕಥೇನೇ ಎಷ್ಟೋವಾಸಿ" ಅಂದ

"ನಾವು ಡಾರ್ವಿನ್ ಥಿಯರೀನೂ ನಂಬಲ್ಲ, ಬೈಬಲ್ಲನ್ನೂ ನಂಬಲ್ಲ. ಬ್ರಹ್ಮ ಸೃಷ್ಟಿ ಒಂದೇ ಸತ್ಯ. ಬ್ರಹ್ಮ ಒಂದು ಅಚ್ಚು ತಯಾರಿಸಿ, ಎರಕಹೊಯ್ದು ಮನುಷ್ಯರನ್ನ ಸೃಷ್ಟಿಸ್ತಾನೆ ಕಿಳೀತಾ ? ಎಲ್ಲೋ ಒಮ್ಮೊಮ್ಮೆ ಎರಕದ ಕಾವು ಕಮ್ಮಿ ಆದ್ರೆ ನಿಮ್ಮ ತರಹ ತಣ್ಣಗಿನ ಬಿಳೀ ತೊಗಲಿನೋರು ಹುಟ್ಕೊಳ್ತಾರೆ ಅಷ್ಟೇ" ಮೂರು ನಾಲ್ಕು ದಿನಗಳ ಒಡನಾಟ, ಸಲಿಗೆಗೆ ದಾರಿ ಮಾಡಿತ್ತು.

ದವೋಸ್‌ನಲ್ಲಿನ ಬೆಟ್ಟಗುಡ್ಡಗಳು, ಕಣಿವೆ ಕಂದರಗಳು ಮನಮೋಹಕವಾಗಿದ್ದವು. ನಿಜ. ಆದರೆ ಅಲ್ಲಿನ ಸೌಂದರ್ಯಕ್ಕೆ ಅಪೂರ್ವ ಮೆರಗು ನೀಡಿದ್ದು ಅಲ್ಲಿನ ಜನಗಳ ಶಿಸ್ತು ಸಂಯಮ, ಆದರ, ವಿಶ್ವಾಸ ಈ ಗುಣಗಳು. ಊರಿನ ಬೀದಿಗಳನ್ನು ಆ ಜನರು ಸ್ವಚ್ಛವಾಗಿಟ್ಟಿರುವ ರೀತಿ ನೋಡಿದರೆ, ಇಲ್ಲಿನವರಿಗೆಲ್ಲಾ ಚಿಕ್ಕ ವಯಸ್ಸಿನಿಂದ ಇದೊಂದು ಗೀಳೇನೋ ಅನ್ನುವಂತಿತ್ತು. ದವೋಸ್‌ನಲ್ಲಿ ನಾವು ತಂಗಿದ್ದ ಹೊಟೇಲು, ಬಜೆಟ್ ಪ್ರವಾಸಿಗರಿಗೆಂದೇ ಮೀಸಲಾಗಿದ್ದ ತಾಣ. ಹಾಗೆಂದ ಮಾತ್ರಕ್ಕೆ ಕಳಪೆ ಹೋಟಲು ಎಂದೇನೂ ಅಲ್ಲ. ನಮ್ಮ ಉತ್ತಮ ತರಗತಿಯ ಹೊಟೇಲುಗಳಲ್ಲಿರುವ ಎಲ್ಲಾ ಸೌಲಭ್ಯಗಳು ಅಲ್ಲಿದ್ದವು. ನೆಲದ ಮಟ್ಟದಲ್ಲಿ ಡೈನಿಂಗ್ ಹಾಲ್, ಲೌಂಜ್. ಕಾರಿಡಾರಿನಲ್ಲಿ ಝಗ ಝಗಿಸುವ ದೀಪಗಳಿಂದ ತುಂಬಿದ ಸ್ವಿಸ್ ಜಿವೆಲರಿ ಗಡಿಯಾರ ಚಾಕೊಲೇಟ್ ಅಂಗಡಿಗಳು. ಮೂರು ಅಂತಸ್ತಿನ ಮಹಡಿಯಲ್ಲೆಲ್ಲಾ ಪ್ರವಾಸಿಗರ ಕೊಠಡಿಗಳು. ಬೇಸ್‌ಮೆಂಟ್‌ನಲ್ಲಿ ಒಂದು ಡಿಸ್ಕೋಕ್ಲಬ್. ಆ ಡಿಸ್ಕೊ ಕ್ಲಬ್ ಸುತ್ತ ಮುತ್ತಲಿನ ಯುವಕ ಯುವತಿಯರಿಗೆಲ್ಲಾ ಸಂಜೆಯ ಭೇಟಿಯ ಕೇಂದಬಿಂದುವಾಗಿತ್ತು. ಕತ್ತಲು ಗವಿ, ಮಿಣುಕು ದೀಪಗಳು, ಗೋಡೆಯೊಳಗೆ ಹುದುಗಿಸಿದ್ದ ಸ್ಪೀಕರುಗಳಿಂದ ಎದೆ ನಡುಗಿಸುವ ಬೀಟ್ ಮ್ಯೂಸಿಕ್, ದೂರದ ಕೊನೆಯಲ್ಲಿ ವೇದಿಕೆಯ ಮೇಲೆ ವಾದ್ಯವೃಂದ ಹಾಗೂ ಗಾಯಕರ ಗುಂಪು, ಪ್ರವೇಶಿಸುತ್ತಲೇ ಬಲಬದಿಯಲ್ಲಿ ವೃತ್ತಾಕಾರದ ಒಂದು ಬಾರ್, ಬಾರ್‌ನಲ್ಲಿ ಮಾತ್ರ ಪ್ರಕಾಶಮಾನವಾದ ದೀಪ. ಬಾರ್ ಕಟ್ಟೆಯ ಸುತ್ತ ಎತ್ತರದ ಸ್ಟೂಲುಗಳು. ಬಾರ್ ಮಧ್ಯೆ ಗ್ರಾಹಕರಿಗೆ ಬೇಕಾದ ಪಾನೀಯಗಳನ್ನು ಬೆರೆಸಿಕೊಡುತ್ತಿದ್ದ ಸ್ಪುರದ್ರೂಪಿ ಸ್ವಿಸ್‌ಯುವಕ ಎಕ್ಕೀ· ಕಪ್ಪು ಸೂಟು ಶುಭ್ರ ಬಿಳಿ ಷರಟಿನ ಮೇಲೆ ಕಪ್ಪು ಬೋಟೈ ಬ್ಲಾಂಡ್ ಕೂದಲು ಎಕ್ಕೀಗೆ ಬರದ ಭಾಷೆಯಿಲ್ಲ. ನನ್ನ ಜರ್ಮನ್ ಕೇಳಿ ಅವನಿಗೆ ಖುಷಿ. "ನಿಮ್ಮ ದೇಶದಲ್ಲಿ ಇಷ್ಟು ಚೆನ್ನಾಗಿ ಜರ್ಮನ್ ಕಲಿಸುವ ಸ್ಕೂಲುಗಳಿವೆಯೇ ?" ಎಂದು ಪದೇ ಪದೇ ಆಶ್ಚರ್ಯ ಪಡುತ್ತಿದ್ದ ಎಕ್ಕಿ.

ಒಂದು ಸಂಜೆ ನಾನು ವೈಟ್ ವೈನ್ ಕುಡಿಯುತ್ತ ಬಾರ್‌ನಲ್ಲಿ ಕುಳಿತಿದ್ದೆ. ನನ್ನ ಪಕ್ಕದಿಂದ 'ಹಲೊ' ಎಂಬ ದನಿ ಕೇಳಿ ಬಂತು. ತಿರುಗಿ ನೋಡಿದೆ. ಪಕ್ಕದ ಸ್ಟೂಲಿನಲ್ಲಿ ಒಂದು ಕವನ ಕುಳಿತಿತ್ತು "ನಾನು ಗಿಟ್ಟಾ, ಸರಾಗವಾಗಿ ಜರ್ಮನ್ ಮಾತನಾಡುವ ಇಂಡಿಯನ್ ನೀವೇನಾ?" ಅಂತ ಕೇಳಿತು ಆ ಕವನ. ಪರಸ್ಪರ ಪರಿಚಯ ಬಳಿಕ "ಎಕ್ಕೀ ನನ್ನ ಸ್ನೇಹಿತೆಗೊಂದು ಪಾನೀಯ ಕೊಡು ಏನು ಆರ್ಡರ್ ಮಾಡಲಿ ಗಿಟ್ಟಾ? ಷ್ನಾಪ್ಸ್ ವೈನ್ ಏನಾದರೂ ಆರಿಸಬಹುದು ನೀನು"

ಷ್ನಾಪ್ಸ್ ಎಂದರೆ ವಿಸ್ಕಿ. ವೈನ್‌ಗಿಂತ ಮೂರು ಪಟ್ಟು ಬೆಲೆ. ದೇವರ ದಯೆ. ಆಕೆ ವೈನ್ ಅಷ್ಟೇ ಕೇಳಿದಳು.

ಗಿಟ್ಟಾ ಬಲು ಮಾತುಗಾತಿ. ಯುರೋಪಿಯನ್ ಸಂಪ್ರದಾಯದ ಪ್ರಕಾರ ಗಿಟ್ಟಾಳನ್ನು ಡ್ಯಾನ್ಸ್‌ಗೆ ಆಹ್ವಾನಿಸಿದೆ. ಒಮ್ಮೆ ಎಕ್ಕೀ ಕಡೆ ಕಣ್ಣಾಡಿಸಿ, ಸಂತೋಷದಿಂದ ಅವಳು ಒಪ್ಪಿದಳು. ತಾರುಣ್ಯದ ಸಹಜ ಉತ್ಸಾಹ, ಸ್ವಿಸ್ ತರುಣಿಯರ ಮುಗ್ಧ ಸರಳತೆ ಇಷ್ಟಗಳೆಲ್ಲದರ ಸಂಭ್ರಮದಲ್ಲಿ ವೇಳೆ ಸರಿದದ್ದೇ ತಿಳಿಯಲಿಲ್ಲ. ಹತ್ತು ಗಂಟೆಯ ಹೊತ್ತಿಗೆ ಗಿಟ್ಟಾ" ನಾನು ಇನ್ನು ಹೋಗಬೇಕು ಶಿವ. ನಾಳೆ ಸಂಜೆ ಏಳು ಘಂಟೆಗೇ ಬರುತ್ತೇನೆ. ಬೇರಾರೊಂದಿಗೂ ಡೇಟ್ ಒಪ್ಪಿಕೊಳ್ಳಬೇಡ ಗೂಟೆನ್ ಆಬೆಂಡ್' ಅಂತ ವಿದಾಯ ಹೇಳಿ ಹೊರಟಳು "ಒಳ್ಳೆ ಡೇಟ್ ಸಿಕ್ಕ ಹಾಗೆ ಕಾಣುತ್ತೆ" ಅಂದ ಎಕ್ಕೀ. "ನಾಳೇನೂ ಬರ್ತಾಳಂತೆ" ಅಂತ ಸ್ವಲ್ಪಬೀಗುತ್ತಾನೆ ಹೇಳಿದೆ. "Good luck" ಅಂದ ಎಕ್ಕೀ.

ಮಾರನೆಯ ಸಂಜೆ ನಾನು ಆರೂಮುಕ್ಕಾಲಿಗೇ ಬಾರ್‌ನಲ್ಲಿ ಹಾಜರ್. ಎಕ್ಕೀ ಬಾರ್‌ನ ಬಡುವಿನ ಮೇಲಿದ್ದ ಗಾಜಿನ ಲೋಟಾಗಳನ್ನು ಒರೆಸಿ ಶುಭ್ರಮಾಡುತ್ತಿದ್ದ, ನನ್ನನ್ನು ನೋಡಿದೊಡನೆ "ಏನು ಸೊಗಸುಗಾರ ಪುಟ್ಟಸಾಮಿ, ಸಿದ್ಧವಾಗಿ ಬಂದಂತಿದೆ" ಅಂತ ತಮಾಷೆ ಮಾಡಿದ. ನಾನು ವೈನ್ ಹೀರುತ್ತಾ ಕುಳಿತೆ. ಏಳೂವರೆ ಆದರೂ ಗಿಟ್ಟಾಳ ಸುಳಿವಿಲ್ಲ. ಎಂಟು ಘಂಟೆಗೆ ಪ್ರಾರಂಭವಾದ ನಿರಾಶೆ, ಎಂಟೂವರೆಯ ಹೊತ್ತಿಗೆ. ಒಂದು ಸಂಜೆಯನ್ನು ಅನ್ಯಾಯವಾಗಿ ಕೆಡಿಸಿದ್ದಕ್ಕೆ ಗಿಟ್ಟಾಳನ್ನು ಶಪಿಸುವ ಮಟ್ಟಕ್ಕೆ ಏರಿತ್ತು. ಅಲ್ಲಿಯವರೆಗೂ ಎಕ್ಕೀ ಬೇರೆ ಗಿರಾಕಿಗಳೊಂದಿಗಿದ್ದುದರಿಂದ, ಅವನಿಗೆ ನನ್ನೊಡನೆ ಮಾತನಾಡಲು ಸಮಯವೇ ಸಿಕ್ಕಿರಲಿಲ್ಲ. ಒಂಭತ್ತಕ್ಕೆ ಎಕ್ಕೀ ನನ್ನ ಬಳಿ ಬಂದ.

"ಶಿವ, ನಿನ್ನ ಸಂಜೆ ಕೆಟ್ಟು ಕೂತಿದೆ ಅಂತ ಗೊತ್ತು. ನನ್ನ ಡ್ಯೂಟಿ ಇವತ್ತು ಬೇಗ ಮುಗಿಯುತ್ತೆ, ನನ್ನೊಡನೆ ಡಿನ್ನರ್‌ಗೆ ಯಾಕೆ ಬರಬಾರದು" ಅಂತ ವಿಶ್ವಾಸ ದಿಂದನನ್ನನು ಆಹ್ವಾನಿಸಿದ. ಸಂತೋಷದಿಂದ ಅವನೊಂದಿಗೆ ಹೊರಟೆ ಬೇಸ್‌ಮೆಂಟ್ ನಿಂದ ಹೊರಕ್ಕೆ ಬಂದು, ಮೆಟ್ಟಿಲು ಹತ್ತಿ ಹೋಟೆಲಿನ ಡೈನಿಂಗ್ ಹಾಲ್‌ಗೆ ಬಂದೆವು. ಎಕ್ಕೀ, ನಮಗಾಗಿ ಕಾದಿರಿಸಿದ್ದ ಮೂಲೆ ಟೇಬಲ್ಲಿಗೆ ನನ್ನನ್ನು ಕರೆದೊಯ್ದ.

"ಶಿವ ಡಿನ್ನರ್‌ಗೆ ನನ್ನ ಫಿಯಾನ್ಸಿಯನ್ನೂ ಸಹಾ ಆಹ್ವಾನಿಸಿದ್ದೇನೆ. ಪರವಾ ಗಿಲ್ಲ ತಾನೆ" ಅಂತ ಕೇಳಿದ ಎಕ್ಕೀ.

''with pleasure'' ಮದುವೆ ಯಾವಾಗ ? ಅಂತ ಕೇಳಿದೆ.

"ಬರುವ ಕ್ರಿಸ್ ಮಸ್ ಸಮಯಕ್ಕೆ ಅಂತ plan ಮಾಡಿದ್ದೆವ. ಇಗೋ ಅವಳೇ ಬಂದಳು" ಅಂತ ಎದ್ದು ನಿಂತ.

ನಾನು ಸಹ ಎದ್ದು ನಿಂತು ಬಾಗಿಲ ಕಡೆ ನೋಡಿದೆ. ಕೆಂಪು, ಬಿಳುಪು ಚೌಕಳಿ ಫ್ರಾಕ್ ದರಿಸಿದ್ದ ಗಿಟ್ಟಾ ನಮ್ಮೆಡೆಗೆ ಬರುತ್ತಿದ್ದಳು.

"ಎಕ್ಕಿ, ಏನು ಇದೆಲ್ಲಾ ?"

"ಶಿವ ಈ ಹೆಂಗಸರ ಸಹವಾಸಾನೇ ಹೀಗೆ. ಮೊನ್ನೆ ಬೆಳಗ್ಗೆ ಯಾವುದೋ ಜಗಳಕ್ಕೆ ನನ್ನ ಮೇಲೆ ಮುನಿಸಿಕೊಂಡು ಮಾತು ಬಿಟ್ಟಿದ್ದಳು. ಸಂಜೆ ಬಾರ್‌ಗೆ ಬಂದು ನನ್ನ ಮುಂದೆ, ನಿನ್ನೊಡನೆ ಚೆಲ್ಲಾಟ ಆಡಿದರೆ, ನಾನು ರೇಗಿ ಮಾತನಾಡಿಸುತ್ತೇನೆ ಅಂತ ಅವಳು ಲೆಕ್ಕ ಹಾಕಿದ್ದಳು. ನಿನ್ನ ಸಂಜೇನ ಯಾಕೆ ಕೆಡಿಸಲಿ ಅಂತ ನಾನು ಅವಳು ಹೋಗುವವರೆಗೂ ಸುಮ್ಮನಿದ್ದೆ. ಇವತ್ತು ಬೆಳಗ್ಗೆ ಕ್ಷಮಾಪಣೆ ಕೇಳಿದ" ಅಂದ ಎಕ್ಕಿ.

ಗಿಟ್ಟಾ ಏನು ಹೇಳಲೂ ಸಾಧ್ಯವಾಗದೆ ಕಳ್ಳನಗು ನಗುತ್ತಿದ್ದಳು

* * * *

ಗಂಟೆ ಎರಡಾಗಿತ್ತು. ಬೆಳಗಿನ bitterness ಎಲ್ಲಾ ಮಾಯವಾಗಿತ್ತು. ಹೊಸ ಉತ್ಸಾಹದಿಂದ, ಆಫೀಸರನ್ನು ಭೇಟಿ ಮಾಡಲು ವರಮಾನತೆರಿಗೆ ಕಛೇರಿ ಯತ್ತ ಕಾಲು ಹಾಕಿದೆ.

**ಹಾದಿಯಲ್ಲಿ ಕೇಳಿಸಿದ್ದು :**

"ನೋಡಿ ಈ ಕಾಲೇಜ್ ಶಿಕ್ಷಣದಿಂದ ಒಂದು ಪ್ರಯೋಜನ ಇದೆ. ಜಗತ್ತಿನ ಆತಂಕಾನೆಲ್ಲಾ ತಲೆಗೆ ಹಚ್ಚಿಕೊಂಡು ಇಲ್ಲೀ Worry ಗಳನ್ನು ಮರ್‍ಯೋದಕ್ಕೆ ಸಹಾಯ ಆಗುತ್ತೆ"

# ಎಷ್ಟಾದರೂ ಮಿಲ್ಟ್ರಿ ಮನುಷ್ಯ

**—ಕಂಭಂ ಕೃಷ್ಣಮೂರ್ತಿ**

ಮಿಲ್ಟ್ರಿಯಲ್ಲಿ ಸೇವೆಸಲ್ಲಿಸಿ ಬ್ರಿಗೇಡಿಯರಾಗಿ ನಿವೃತ್ತಿಹೊಂದಿದ್ದ ಕುಪ್ಪಣ್ಣ ಈಗ ಮುಳ್ಳೂರಿನ ಅವನ ಸ್ವಂತ ಮನೆಯಲ್ಲೇ ವಾಸವಾಗಿದ್ದಾನೆಂದು ತಿಳಿದು ನನಗೆ ಬಲು ಖುಷಿಯಾಯಿತು. ಓದು, ಉದ್ಯೋಗಾಂತ ಮುಳ್ಳೂರಿನಿಂದ ಚೆದುರಿ ಹೋಗಿದ್ದ ಗೆಳೆಯರೆಲ್ಲಾ ಮರಳಿ ಊರಿಗೆ ಬಂದರೆ ಎಷ್ಟು ಚೆನ್ನ ಅಂತ ಲೆಕ್ಕಹಾಕಿದೆ. ನಾನು ಕುಪ್ಪುವಿನ ಮನೆಗೆ ಹೋದಾಗ ಸಂಜೆಯ ಏಳು ಘಂಟೆ. ಅವನು ಕಾಂಪೌಡಿನಲ್ಲಿ ಚುಟ್ಟಾ ಸೇದುತ್ತಾ ಕಾಲಾಡಿಸುತ್ತಿದ್ದ. ಕಲ್ಲಿ ಮೀಸೆಯನ್ನು ಹೊತ್ತ ಗಡಸುಮುಖ ಅಜಾನುಬಾಹುವಾದಕಾಯ, ಮಿಲ್ಟ್ರಿಗೆ ಹೇಳಿ ಮಾಡಿಸಿದಂತಹ ವ್ಯಕ್ತಿತ್ವ.

ನಾನು ಗೇಟಿನ ಶಬ್ದ ಮಾಡಿದೊಡನೆಯೆ ಅವನು ನನ್ನ ಕಡೆಗೆ ದುರುಗುಟ್ಟಿ ನೋಡಿದ. ಅವನನ್ನು ನೋಡಿ ನಲವತ್ತು ವರ್ಷಗಳ ಮೇಲಾಗಿತ್ತು. ಗುರುತು ಹಿಡಿಯುತ್ತಾನೆಯೋ ಇಲ್ಲವೋ ಎಂಬ ಅನುಮಾನದಿಂದಾಗಿ ನಾನು ಗೇಟಿನ ಬಳಿಯೇ ನಿಂತೆ.

"ಬಾರೋ ಒಳಗೆ ಬದ್ಮಾಷ್ ನನ್‌ಮಗನೆ" ಎಂದು ಗಡಸುಕಂಠದಿಂದ ಘರ್ಜಿಸಿದ. ನಾನು ಅತ್ತ ಇತ್ತ ನೋಡುತ್ತಿರುವಂತೆ, ಅವನೇ ದಾಪುಗಾಲು ಹಾಕುತ್ತಾ ನನ್ನ ಕಡೆಗೆ ಬಂದ. ಬಂದವನೇ ನನ್ನನ್ನು ಬಾಚಿ ತಬ್ಬಿಕೊಂಡ, ಅವನ ಕಬಂದ ಬಾಹುವಿನ ಬಂಧನಕ್ಕೊಳಗಾಗಿ ನನಗೆ ಉಸಿರೇ ಸಿಕ್ಕಿಕೊಂಡಂತಾಯ್ತು. ಮಾಂಸ ತಿಂದು, ಮಧ್ಯ ಕುಡಿದು ಕೊಬ್ಬಿದ್ದ ಕುಪ್ಪಣ್ಣ ಕದರುಕಡ್ಡಿಯಂತಿದ್ದ ಪುಳಿ ಚಾರಿಯಾದ ನನ್ನನ್ನು ತಬ್ಬಿ ಹಿಡಿದರೆ ನನ್ನ ಎಮುಕೆಗಳ ಗತಿಯೇನು ? ಉಪಾಯ ದಿಂದ ಅವನ ಹಿಡಿತದಿಂದ ಬಿಡಿಸಿಕೊಂಡೆ. "ಅಂತೂ ನನ್ನ ಗುರುತು ಹಿಡಿದ್ಯಲ್ಲಾ ಕುಪ್ಪು" ಎಂದೆ.

"ನಾನೇನು ನಿನ್ನ ತರಹೆ ಈಡಿಯಟ್ಟೇನೋ ಮರ್‍ರ್ಯೋಕೆ ನಾವು ಚಡ್ಡಿ ದೋಸ್ತಿ ಗಳಲ್ವೇನೋ ?" ಎಂದು ಮಿಲ್ಟ್ರಿ ನಗೆಯನ್ನು ನಕ್ಕ.

ನಾನೂ ರಿಟೈರಾದ ವಿಷಯ ಹೇಳಿದಾಗ "ನಿಂಗೂ ರಿಟೈರ್ ಆಗೋಯ್ತಾ ಏನು ನಿನ್ನ ಡೇಟ್ ಆಫ್ ಬರ್ತ್" ಎಂದು ಕೇಳಿದ. ನಾನು ಅವನ್ನು ಹೇಳಿದೆ. ಇಬ್ಬರೂ ಹಳೆಯನೆನಪುಗಳನ್ನು ಮೆಲಕು ಹಾಕಿದೆವು. ರಿಪಬ್ಲಿಕ್‌ಸೀರಿಯಲ್ ಫೈಟಿಂಗ್ ಪಿಕ್ಚರ್‌ಗೆ ಇಬ್ಬರೂ ಹೋಗುತ್ತಿದುದು, ಮೂರಾಣೆಕ್ಲಾಸಿನ ಟಿಕೆಟ್ಟಿಗೆ ಪರಟು

ಕಳಚಿ, ನುಗ್ಗುತ್ತಿದ್ದುದು, ಮುಂತಾಗಿ ಎಲ್ಲಾ ಬಾಲ್ಯ ಚೇಷ್ಟೆಗಳನ್ನು ಜ್ಞಾಪಿಸಿಕೊಂಡಿದ್ದಾಯ್ತು. ನೆನಪುಗಳು ಬಲು ಹಿತವಾಗಿತ್ತು. ಸರಿಯಾಗಿ ಎಂಟುವರೆಗೆ ಅವನು ತಟಕ್ಕನೆ ಎದ್ದ ನನ್ನ ಊಟದ ಟೈಮಾಯ್ತು. ಇನ್ನು ನೀನು ಹೊರಡು. ನಾಳೆ ಹನ್ನೆರಡು ಘಂಟೆಗೆ ನಮ್ಮ ಮನೆಗೆ ಲಂಚ್‌ಗೆ ಬಾ" ಎಂದ.

"ಅದೆಲ್ಲಯಾಕೋ ಕುಪ್ಪು, ಆ ತೊಂದರೆಯ ತೆಗೋ ಬೇಡಾ" ಎಂದೆ ಸಂಕೋಚದಿಂದ.

"ಬಾಯ್ಮುಚ್ಕೊಂಡು ನಾನು ಹೇಳಿದ ಟೈಮಿಗೆ ಬಂದು ಬಿಡು, ಇದು ನನ್ನ ಆರ್ಡರ್ರು" ಎಂದ. ಅವನಿಗೆ ಆರ್ಡರ್ ಮಾಡುವುದೇ ಅಭ್ಯಾಸ. "ಸರಿ ಇನ್ನು ಹೊರಡು. ಗುಡ್ ನೈಟ್" ಎಂದು ಹೇಳಿ ಒಳಗೆ ಹೊರಟೇ ಹೋದ.

ಇದ್ಯಾವ ಸೀಮೆ ಮನುಷ್ಯ ಎಂದು ನನಗೆ ಅರ್ಥವಾಗಲೇ ಇಲ್ಲ. ಸ್ನೇಹಿತರು ಅದೂ ಬಾಲ್ಯ ಸ್ನೆಹಿತರು ವರ್ತಿಸುವ ಪರಿಯೇ ಇದು ? ಒಂದು ರೀತಿಯ ಮಿಲ್ಟ್ರಿಯ ಗತ್ತಿರಬಹುದೇ ಎಂದು ಕೊಂಡೆ. ಮಾರನೆಯ ದಿನ ಅವನ ಮನೆಗೆ ಹೋಗುವುದೇ ಬೇಡವೇ ಎಂಬ ಜಿಜ್ಞಾಸೆಯಲ್ಲೇ ಹನ್ನೆರಡು ಘಂಟೆ ಆಗಿಯೇ ಹೋಯಿತು. ಕಡೆಗೆ ಒಂದು ನಿರ್ಧಾರಕ್ಕೆ ಬಂದು ಕುಪ್ಪಣ್ಣನ ಮನೆಗೆ ಹೋದೆ. ಅವನು ವೆರಾಂಡದಲ್ಲಿ ಕೂತು ಚುಟ್ಟಾ ಸೇದುತ್ತಿದ್ದ.

"ಲೇಟಾಗೋಯ್ತು ಕುಪ್ಪು. ಏನು ತಿಳ್ಕೋಬೇಡ" ಎಂದೆ ನಾನು. "ನಾನ್ಯಾಕೆ ತಿಳ್ಕೊಳ್ಳಿ. ನಿನಗೆ ಲಂಚಿಲ್ಲ ಅಷ್ಟೆ" ಎಂದ ನಿಸೂರಾಗಿ "ಮೂರು ಘಂಟೆಗೆ ನಮ್ಮಲ್ಲಿ ಟೀ, ಅಲ್ಲೀವರ್ಗೂ ಕಾಯ್ತಿರು" ಅಂದ ಎಲಾ ಇವನ. ನಾನು ಒಂದು ತೊಟ್ಟು ಕಾಫಿ ಬಿಟ್ಟು ಬಾಯಿಗೆ ಏನೂ ಹಾಕಿರಲಿಲ್ಲ. ಹಸಿವು ಕಿತ್ತು ತಿನ್ನುತ್ತಿತ್ತು. ಲಂಚಿಲ್ಲಾಂತ ತಾರಮಯ್ಯ ಆಡಿಸ್ತಿದಾನೆ. ಇದೆಂಥಾ ಆತಿಥ್ಯ ಇವನದು" ಎಂದು ಮನಸ್ಸಿನಲೇ ರೇಗಿದೆ." ಇವನ ಟೀಗೆ ಕಾಯೋಕೆ ನಾನೇನು ಇವನ ಸಾಕಿದ ಶುನಕನೇ" ಎಂದು ಮನಸ್ಸಿನಲೇ ಗೊಣಗುಟ್ಟಿಕೊಂಡೆ.

"ಕುಪ್ಪು, ನನಗೆ ಬೇರೆ ಸ್ವಲ್ಪ ಕೆಲಸ ಇದೆ. ಇನ್ನೊಂದು ದಿವಸ ಬಂದ್ರಾಯ್ತು ಬಿಡು" ಎಂದು ಏಳಲು ಹೊರಟೆ, ಅವನು ನನ್ನ ಕೈ ಹಿಡಿದು, ದರದರನೆ ಹಾಲಿಗೆ ಎಳೆದುಕೊಂಡು ಬಂದು, ಅಲ್ಲಿದ್ದ ಸೋಫಾ ಮೇಲೆ ಕೂಡಿಸಿದ, "ನಾನು ಎರಡೂ

ಮುಕ್ಕಾಲು ವಗೂರ್ ಮಲಗೋ ಪದ್ಧತಿ, ಆ ಮೇಲೆದ್ದು ಮೂರು ಘಂಟೆಗೆ ನಿನ್ನ ಜತೆ ಟೀ ಕುಡೀತಿನಿ, ಅಲ್ಲೀವರ್ಗೂ ಇಲ್ಲಿರೋ ಪೇಪರುಗಳ್ನ ಓದ್ತಾ ಇರು, ತಪ್ಪಿಸಿ ಕೊಳ್ಳೋಕೆ ಟ್ರೈ ಮಾಡ್ಬೇಡ ಹುಷಾರ್" ಎಂದು ನನಗೆ ಬೆದರಿಕೆ ಹಾಕಿ, ಒಳಗೆ ಹೋದ, ಒಳ್ಳೆ ಮಿಲ್ಟ್ರಿಯವನ ಸಹವಾಸವಾಯ್ತಲ್ಲ ಎಂದು ನಾನು ಪರಿತಪಿಸಿದೆ. ಕುಪ್ಪುವಿಗೆ ಈ ಗತ್ತು, ಅದಬ್ಬೆಲ್ಲಾ ಎಲ್ಲಿಂದ ಬಂತು ಎಂದು ಚಿಂತಿಸುತ್ತಾ ಕುಳಿತೆ. ಹತ್ತು ನಿಮಿಷ ಕಳೆದ ಮೇಲೆ ಬಳೆಗಳ ಸದ್ದಾಯ್ತು ಕುಪ್ಪುವಿನ ಹೆಂಡತಿ ಒಳಗಿಂದ ಬಂದಳು. "ಬನ್ನಿ ಊಟ ಮಾಡೋರಂತೆ ಎಂದಳು· "ಅಯ್ಯೋ ಬ್ಯಾಡೀಮ್ಮ ಅವನು ಟೀಗೆ ಕಾದಿರೂಂತ ಹೇಳಿ ಹೋಗಿದ್ದಾನೆ. ಇನ್ನು ನಾನು ಈ ಆವೇಳೆಯಲ್ಲಿ ಲಂಚ್‌ಗೆ ಕೂತದ್ದು ಕಣ್ಣಿಗೆ ಬಿದ್ದರೆ, ನನ್ನನ್ನು ಅರ್ಧ ಊಟದಲ್ಲೇ ಎಳೆದು ಹೊರಗೆ ಹಾಕ್ತಾನೆ. ಕ್ಷಮಿಸಿ" ಎಂದೆ ನಾನು ಅವಳು ನಕ್ಕಳು, ಹೂ ಚೆಲ್ಲಿದಂತಹನಗೆ "ಇರಲಿ ನೀವು ದಯವಿಟ್ಟು ಬನ್ನಿ. ಅವರು ಎರಡು ಮುಕ್ಕಾಲು ಘಂಟೆಯವರೆಗೆ ಏಳೋದೂ ಇಲ್ಲ, ರೂಮು ಬಿಟ್ಟು ಹೊರ ಬರೋದೂ ಇಲ್ಲ" ಎಂದು ಹೇಳಿ ಬಲವಂತವಾಗಿ ನನ್ನನ್ನು ಊಟಕ್ಕೆಬ್ಬಿಸಿದಳು, ವೆಜಿಟಬಲ್ ಪಲಾವು, ಶ್ಯಾವಿಗೆ ಪಾಯಸ, ಕ್ಯಾರೆಟ್ ಕೋಸಂಬರಿ ಒಂದೊಂದು ಐಟಮನ್ನೂ ಆಕೆ ಉಪಚರಿಸುತ್ತಾ ಬಡಿಸಿದಳು." ನಿಮಗೆ ಬಹಳ ಇಷ್ಟಾಂತ ಹೋಳಿಗೆ ಮಾಡೋಕೆ ಹೇಳಿದ್ರು. ಹೇಗಿದಿಯೋ ಗೊತ್ತಿಲ್ಲ" ಎಂದು ಸಂಕೋಚ ಪಡುತ್ತಾ ಹೇಳಿದಳು. ಹೋಳಿಗೆ ಬಲು ರುಚಿಯಾಗಿತ್ತು. ಅದನ್ನು ತಿನ್ನುತ್ತಿದ್ದಾಗಲೂ ನನಗೆ ಕುಪ್ಪುವಿನ ಹೆದರಿಕೆಯೆ, ಎಲ್ಲಿ ಅವನು ಬಂದು ನನ್ನಬಾಯಿಂದ ಹೋಳಿಗೆಯನ್ನು ಕಿತ್ತು ಬಿಸಾಡುತ್ತಾನೆಯೋ ಎಂಬ ಗಾಭರಿ, ನಾನು ಹೆದರಿಕೊಂಡು, ಆ ಕಡೆ ಈ ಕಡೆ ಕಣ್ಣು ಹಾಯಿಸುತ್ತಾ ಊಟ ಮಾಡುತ್ತಿದ್ದುದನ್ನು ನೋಡಿ ಆಕೆ ನಕ್ಕಳು. "ಏನೂ ಭಯಪಡಬೇಡಿ, ನಿಮ್ಮ ಸ್ನೇಹಿತರೇ ನಿಮಗೆ ಬಡಿಸುವಂತ ನನಗೆ ಅಪ್ಪಣೆ ಮಾಡಿ ಹೋಗಿದ್ದಾರೆ." ಎಂದು ಅವಳು ಹೇಳಿದಾಗ ನನಗೆ ಅಚ್ಚರಿ.

"ಅವರದೆಲ್ಲಾ ಬರೀ ಮೇಲಿನ ಮಿಲ್ಟ್ರಿಗತ್ತು ದರ್ಪ ಅಷ್ಟೆ. ಹೃದಯ ಬಹಳ ಮೃದು" ಎಂದು ಆಕೆ ಹೇಳಿದಾಗ ನನಗೆ ನಂಬದೆಯಿರಲು ಆಗಲಿಲ್ಲ. ನಾನೂ ಊಟದ ಮಧ್ಯೆ ಆಕೆಯ ಯೋಗಕ್ಷೇಮ ವಿಚಾರಿಸಿದೆ.

"ಇವರು ಸರ್ವಿಸಿನಲ್ಲಿದ್ದಾಗ ಹೇಗಿದ್ದರೋ ರಿಟೈರಾದಮೇಲೂ ಹಾಗೇ ಇದ್ದಾರೆ ಟೈಂ ಟೈಂಗೆ ಎಲ್ಲಾ ಆಗಬೇಕು. ಚಾಚೂ ತಪ್ಪ ಆಗೋಹಾಂಗಿಲ್ಲ. ಇಷ್ಟೋ ತ್ತಿಗೆ ಸ್ನಾನ, ಈ ಟೈಂಗೆ ಊಟಾಂತ ಎಲ್ಲಾ ಟೈಂಟೇಬಲ್ ಹಾಕಿದ ಹಾಗೆ ನಡೀ

ಬೇಕು. ಅಷ್ಟಕ್ಕೆ ನಾನು ಸ್ನಾನ ಮಾಡೋದು ಸ್ವಲ್ಪ ತಡವಾದರೆ ಬಚ್ಚಲು ಮನೆಯಿಂದ ನನ್ನ ಎಳೆದು ಹೊರಗೆ ಹಾಕಿಬಿಡ್ತಾರೆ" ಎಂದು ಹೇಳಿ ಅವಳು ಮನಸಾರೆ ನಕ್ಕಳು.

"ಹಾಗಿದ್ರೆ ನಿಮಗೆ ಕುಪ್ಪುವಿನಿಂದ ಬಹಳ ತೊಂದರೆಯೇ ಆಗಿರ್ಬೇಕು" ಎಂದೆ ನಾನು ಊಟ ಮುಗಿಸಿ ಏಳುತ್ತಾ.

"ತೊಂದ್ರೆ ಅಲ್ಲ ತಮಾಷೆ ಅನ್ನಿ" ಅಪರಂಜಿ "ಅಂತಹ ಹ್ಯೂಮರ್ ಮ್ಯಾಗಜೈನ್ ಓದಿ ನಾನೂ ಸೆನ್ಸ್ ಆಫ್ ಹ್ಯೂಮರ್ ಬೆಳಸಿ ಕೊಂಡಿದ್ದೀನಿ, ಅವರ ಗಡಿಬಿಡಿ, ಗತ್ತು, ಘರ್ಜನೆ ಇದೆಲ್ಲಾ ಲೈವ್ಲಿಯಾಗಿರೋದಲ್ದೆ ನನಗೆ ತಮಾಷೆಯಾಗೇ ಕಾಣ್ಸುತ್ತೆ, ನನಗೆ ತೊಂದರೆಯಾಗೋದಕ್ಕಿಂತ ನಲಿಯುವ ಒಂದು ಅವಕಾಶ ಸಿಕ್ಕುತ್ತೆ" ಎಂದು ಆಕೆ ಹೇಳಿದಾಗ ಅವಳ ದೃಷ್ಟಿಕೋನಕ್ಕೆ ನಾನು ಮೆಚ್ಚಿದೆ.

"ಕುಪ್ಪು ಯುದ್ಧಗಿದ್ದಕ್ಕೆ ಹೋಗಿದ್ನೇನು" ಎಂದು ತೊಳೆದ ಕೈಯನ್ನು ಟವಲಿನಿಂದ ವರೆಸುತ್ತಾ ಕೇಳಿದೆ. ಸರ್ವಿಸಿನಲ್ಲಿದ್ದಾಗ ಅದೇನು ಕಡಿದು ಕಟ್ಟೆ ಹಾಕಿದರೋ ನಾ ಕಾಣೆ, ಆದ್ರೆ ಈಗ ರಿಟೈರಾದ ಮೇಲೆ ಮನೇಲೆ ದಿನಾ ಯುದ್ಧ ಮಾಡ್ತಿರ್ತಾರೆ. ಬೆಳಿಗ್ಗೆ ಎದ್ದ ತಕ್ಷಣ, ಕಸಮುಸುರೆ ಮಾಡೋನಿಂಗಿ ಹತ್ರ, ಊಟಮಾಡೋವಾಗ ನನ್ನಹತ್ರ, ಸಂಜೆ ಮನೆಗೆ ಬರೋ ಅತಿಥಿಗಳ ಹತ್ರ, ರಾತ್ರಿ ಕೈಗೆ ಸಿಕ್ಕಿದರೆ ಮಕ್ಕಳ ಹತ್ರ, ಇವರ ವಾಗ್ಯುದ್ಧ ನಡೆದೇಯಿರುತ್ತೆ" ಎಂದು ಆಕೆ ಮನಃ ಪೂರ್ವಕವಾಗಿ ನಕ್ಕಾಗ ನನಗೆ ನಗದೇಯಿರಲು ಆಗಲಿಲ್ಲ.

ಗಡದ್ದಾಗಿ ಊಟಮಾಡಿ, ಸಂತೃಪ್ತನಾಗಿ ಬಂದ ನಾನು ಕುರ್ಚಿಯ ಮೇಲೆ ಕೂತು ಪತ್ರಿಕೆಯೊಂದನು ಕೈಲಿ ಹಿಡಿದೆ." ನೀವು ಊಟ ಮಾಡಿದ್ದು ಅವರಿಗೆ ಹೇಳಬೇಡಿ, ಅವರು ನಿಮ್ಮ ಮುಂದೆ ಗತ್ತಿನಿಂದಲೇ ಬೀಗಿಕೊಳ್ಳಲಿ" ಎಂದು ಅವಳು ಹೇಳಿದಾಗ ನಾನು ತಲೆಯಾಡಿಸಿದೆ.

ಕುಪ್ಪು ಎದ್ದು ಮುಖ ತೊಳೆದು, ಹಾಲಿಗೆ ಬಂದಾಗ ಸರಿಯಾಗಿ ಮೂರು ಗಂಟೆ. ಟೀ ಬಿಸ್ಕತ್ತು ಮೇಜಿನ ಮೇಲೆ ಪ್ರತ್ಯಕ್ಷವಾಯಿತು. "ಟೀ ತೊಗೋ" ಎಂದು ಹೇಳಿ ಅವನು ಚಹದ ಕಪ್ಪಿಗೆ ಕೈ ಹಾಕಿದ. ಊಟ ಆಯ್ತಾಂತ ಅವನಿಗೆ ಹೇಳುವ ಹಾಗಿಲ್ಲವಾದ್ದರಿಂದ ನಾನು "ನೀ ತೆಗೋಳಯ್ಯ ನಾನು ಆ ಮೇಲೆ ಕುಡೀತಿನಿ" ಎಂದೆ.

"ನೋ...ನೋ... ಟೈಮಾದರೆ, ನೀನು ಲಂಚಿನ ಹಾಗೆ ಟೀನೂ ಮಿಸ್ ಮಾಡ್ಕೋ ತೀಯ" ಎಂದು ಮಿಲ್ಟ್ರಿ ನಗೆಯನ್ನು ನಕ್ಕ.

ಟೀ ಕುಡಿಯುತ್ತಾ ಮತ್ತೆ ಹಳೆಯ ಗೆಳೆಯರ ಬಗ್ಗೆ ವಿಚಾರ ವಿನಿಮಯವಾ ಯಿತು. ಕರಕ್ಟಾಗಿ ಐದು ಘಂಟೆಗೆ ಮೇಲೆದ್ದ. ಗಿಡಗಳಿಗೆ ನೀರು ಹಾಕಬೇಕೂಂತ ಹೇಳಿ ಹೋಸ್ ಪೈಪ್ ತರಲು ಹೊರಟ. ಇದೇ ಸೂಚನೆಯೆಂಬಂತೆ" ನಾನೂ ಬರ್ತೀನಿ ಕುಪ್ಪು ಎಂದು ಹೇಳಿ ಎಲ್ಲರಿಗೂ ನಮಸ್ಕಾರ ಹೇಳಿ ಹೊರಟೆ "ನಾಳೆ ಡಿನ್ನರ್‌ಗೆ ಬಾ, ಟೈ ಒಂಭತ್ತು ಘಂಟೆ" ಎಂದು ಅಪ್ಪಣೆ ಮಾಡಿದ. ಇಲ್ಲಪ್ಪಾ ನಾನು ಊರಲ್ಲಿರೋಲ್ಲ. ತಗೋ ನನ್ನ ಅಡ್ರೆಸ್ಸು, ಆಗಾಗ ಕಾಗದ ಬರೀತಿರು" ಎಂದು ನನ್ನ ವಿಳಾಸವನ್ನು ಕೊಟ್ಟು ಅವನಿಂದ ಬೀಳ್ಕೊಂಡೆ.

ಪ್ರಾವಿಡೆಂಟ್ ಫಂಡ್, ಪಿಂಚನಿ ಇದರ ಅವಾಂತರದಲ್ಲಿ ನಾನು ಕುಪ್ಪುವನ್ನು ಮರತೇ ಬಿಟ್ಟಿದ್ದೆ. ಆದಿನ ನನ್ನ ಷಷ್ಟ್ಯಾಬ್ಧಿ. ಅರವತ್ತನೆಯ ಹುಟ್ಟಿದ ಹಬ್ಬ. ಹುಟ್ಟಿದ ಹಬ್ಬ ಆಚರಿಸುವ ಪರಂಗಿ ಪದ್ಧತಿಯಿರಲಿಲ್ಲವಾದ್ದರಿಂದ ಅದರಲ್ಲಿ ವಿಶೇಷ ತೆಯೇನೂ ಇರಲಿಲ್ಲ, ನಾನೂ ನನ್ನ ಪತ್ನಿ ಗುಡಿಗೆ ಹೋಗಿ ಒಂದು ಅರ್ಚನೆ ಯನ್ನು ಮಾಡಿಸಿ, ಮನೆಗೆ ಬಂದೆವು. ಸ್ಪೀಡ್ ಪೋಸ್ಟಿನಲ್ಲಿ ಬಂದಿದ್ದ ಪಾರ್ಸೆಲ್ಲೊಂದು ನನಗಾಗಿ ಕಾದು ಕುಳಿತ್ತಿತ್ತು. ಯಾರು ಕಳಿಸಿದರೆಂದು ನೋಡಿದೆ, ಫ್ರಮ್ ಬ್ರಿಗೇಡಿ ಯರ್ ಕುಪ್ಪಣ್ಣ ಎಂದು ಮೇಲೆಯೇ ಬರೆದಿತ್ತು. ಇದೇನು ಕಳಿಸಿದಾನೋ ಈ ಭೂಪತಿ ಎಂದು ತವಕಿಸಿದೆ. ಭಾಂಗಿಯಲ್ಲಿ ಬಾಂಬೇನಾದ್ರೂ ಇಟ್ಟು ಕಳಿಸಿದ್ರೆ ನನ್ನ ಗತಿಯೇನು ಎಂದು ಆತಂಕವಾಯಿತು. ಬಲು ಹುಷಾರಾಗಿ ಪಾರ್ಸಲನ್ನು ಬಿಚ್ಚಿದೆ. ಒಂದು ಜರತಾರಿ ಅಂಚಿನ ಪಂಚೆ, ಶಲ್ಯ ಜತೆಗೆ ಒಂದು ಧರ್ಮಾವರದ ಸೀರೆಯನ್ನು ಕಂಡು ಚಕಿತನಾದೆ. ನನ್ನ ಜನ್ಮ ದಿನವನ್ನು ಜ್ಞಾಪಕದಲ್ಲಿಟ್ಟುಕೊಂಡು ನನಗೆ ಉಡು ಗೊರೆ ಕಳಿಸಿದ್ದ ಕುಪ್ಪಣ್ಣ, ಅವನ ಹೃದಯವಂತಿಕೆಗೆ ನಾನು ಬೆರಗಾದೆ. ಒಂದು ಕಾರ್ಡನ್ನೂ ಇಟ್ಟಿದ್ದ. ತೆಗೆದು ನೋಡಿದೆ "ನೂರು ವರ್ಷಗಳ ಕಾಲ ನೀನೂ, ನಿನ್ನ ಹೆಂಡತಿ ಬದುಕಿ ಬಾಳಿ" ಎಂದು ಅಪ್ಪಣೆ ಮಾಡಿದ್ದ, ಬ್ರಿಗೇಡಿಯರ್ ಕುಪ್ಪಣ್ಣ. ಎಷ್ಟಾದರೂ ಅವನು ಮಿಲ್ಟ್ರಿ ಮನುಷ್ಯನಲ್ಲವೆ ?

# ಬೋರನ ಅಧಿಕ ಪ್ರಸಂಗ

## ಅಮೇರಿಕ ಸ್ವಾತಂತ್ರ್ಯ

**ಕೆ. ವಿ. ಶ್ರೀನಾಥ್**

ಅಲ್ ಕಣ್ ಬುದ್ದಿ... ಆ ಅಮೇರಿಕಾ ದೇಸ್ದೋರ್ ಯಾಕ್ ಇಂಗೆ ನಮ್ಮನ್ನೆಲ್ಲ ಗೋಳೊಯ್ಕೋತಾ ಅವ್ರೆ ಅಂತ...ಆ ದೇಸದ್ ಪ್ರಸ್‌ಡೆಂಟು ಬಿಲಿ ಕಿಲಿಟನ್ನು ಪರ್ ಪಂಚ್‌ದಾಗೆಲ್ಲ ತಾನೇ ಬೋ ಸಾಚಾ ಅಂದ್ಕೊಂಡವ್ನ ಎಂಗೆ ಆಂತ...ನಂ ದೇಸ ಸೊತಂತ್ರ ಬಂದಾಗ್ನಿಂದ ಯಾವ್ದೋ ತಾಪತ್ರಯದಾಗೆ ಎಂಗೋ ನಡ್ಕಂ ಬತ್ತಾ ಐತೆ......ಈ ಸೊತಂತ್ರ ಕಂಡವ್ನು ಯಾಕ್ ಅಂಗ್ ಚೇಳ್ ಕಡ್ದಂಗಾಡ್ತಾ ಅವ್ನೆ ಅಂತ...ಏನೋ ಎಂಗೋ ಮುಂದುಕ್ ಬರುವ ಅಂತ ಪರ್ಯತ್ನ ಪಡೋ ನಮ್ಮಂತೊರ್ನೆಲ್ಲ ಯಾತಾತ್ರದಾಗೋ ಸಿಕ್ಕಾಕ್ಸಿ ದಿಗಿಲಿಡಿಸ್ತಾವ್ನಂತೆ......ಇಸ್ಯ ತಿಳ್ದು ಬೋ ವಟ್ಟೇ ಉರ್ದೋಯ್ತು ಅಮ್ತೀನಿ......

ಅಲ್ ಕಣ್ ಬುದ್ದೀ......ಅವನಿಗ್ಯಾಕ್ರಿ ಬ್ಯಾಕು ಇದೆಲ್ಲ ? ಅಸ್ಟು ಸೊತಂತ್ರ ಯಾರ್ ಕೊಟ್ಟಿದ್ದು ಆವಂಗೆ ? ಅಲ್ಲ ಮಾತಿಗ್ ಕೇಳ್ತೀನಿ......ಬ್ಯಾರೇ ದೇಸದ್ ಸೊತಂತ್ರ ಎಂಗಾರ ಇಟ್ಕಂಡಿರ್ಲಿ ಅದನ್ಯಾಕ್ರೀ ಕಸ್ಕೊಳ್ಬೇಕು ? ಎಳ್ದು ದೇಸಾನ ಯುದ್ಧ ಮಾಡೋ ಅಂಗ್ ಮಾಡಿ ತನ್ ದೇಸ ತಯಾರ್ಸೋ ಆಯುದಾನೆಲ್ಲ ನಾವ್ ಕೊಂಡ್ಕೋಬ್ಯಾಕು ಅಂಗ್ ಅಂಗ್ ಮಾಡವ್ನಲ್ಲ...ಇದು ಯಾವ್ ನ್ಯಾಯ ಅಮ್ತೀನಿ ...ನಾವು ಮಾನವತೆ ಇಲ್ದೋರು ಅಂತ ಏಳ್ತಾನಂತಲ್ಲ......ಅವರ್ ದೇಸ್ದಾಗ್ ಸೊತಂತ್ರ ಎಂಗ್ ಮಡಿಕ್ಕಂಡವ್ರೆ ಅಂತ ನಮಗ್ಗೊತ್ತಿಲ್ಲ ಅಂತ ಅಂದ್ಕಂಡವ್ನೇನು ?

ಅವನ್ ದೇಸ್ದಾಗ ಎಲ್ರೂ ಸೊತಂತ್ರದಾಗೆ ಇದಾರೆ ಅಂದ್ರೆ ಅಲ್ಲಿರೊ ಬಿಳಿ ಜನಗಳ್ನ ಕರಿ ಜನಗಳ್ನ ಎಂಗ್ ನೋಡ್ಕೊಂತಾಂವ್ರೆ ಅಂತ ಎಲ್ರುಗೂ ಗೊತ್ತಿರೋದೇ ಅಲ್ವರಾ...ಇಸ್ಟ ಬಂದಾಗ ಕರಿಜನುಗಳ್ಳ ದನ ಬಡ್ದಂಗೆ ಬಡುದ್ರೂ ಬಿಳಿ ಪೋಲೀಸ್ನೋರ್‌ಮ್ಯಾಗೆ ಯಾವ್ದೇ ಕೇಸಿಲ್ಲ...ಅವರಿಗೆ ಅಸ್ಟು ಸೊತಂತ್ರ...ಅದೇನೋ 'ರೇಪ್' ಅಂತಾರಲ್ಲ...ಅಂತ ಕೇಸುಗ್ಳ ಉಟ್ಟಾಕ್ಸಿ ಕರಿಜನರಲ್ಲಿ ಮುಖ್ಯಸ್ತ್ರು ಎಸರು ಮಾಡ್ಕಂಡವ್ರು ಎಲ್ರೂನ್ನೂ ಒಳಗಾಕೋ ಸೊತಂತ್ರ ಕೂಡ ಐತಂತೆ......ಅಲ್ಲಿರೋ ಬಿಳಿ ನ್ಯಾಯಾದೇಸ್ರೂ ಅಂಗೇ ಅವ್ರಂತೆ...ಆ ಬಿಳಿ ಜನ ಎಲ್ಲಾ ಕ್ಷೇತ್ರದಾಗೂ ತಾವೇ ಮ್ಯಾಲಿರೊ ಅಂಗೆ ನೋಡ್ಕಂಡವೆ......ಅದೇ ಅವರ್ದು ಪ್ರಜಾರಾಜ್ಯ...... ಸಮಾನತೆ...ಮಣ್ಣು ಮಸಿ...

ದೇಸಾನ ಅಂಗಿಟ್ಕೊಂಡು ಆ ಜನ ನಮ್‌ಗೇ ಬುದ್ದೀ ಏಳೋಕ್ಕೆ ಬತ್ತಾರಲ್ಲ... ಅಂತೂ ಏನೋ ನೆಪ ಚಿಕ್ತು ಅಂದ್ರೆ ಸಾಕು ಆ ಜನ ನಮ್ ವ್ಯಾಗೆ ಬೂಳೋಕ್ಕೆ ತಯಾರು ಅವ್ರುೀನಿ...

ನಂ ಜನಾನೂ ದಡ್ರೆ ಬುಡ್ರೀ...ಅದೇನು ಪಾರಿನ್ನು ಅಂದಾಕ್ಷಣಾ ತಾವೇನೋ ತಾಯೀಗೆ ಉಟ್ಟಿಲ್ಲ...ಅನ್ನೋ ಅಂಗೆ ಆಡ್ತಾರೆ...ನಮ್‌ಗೆ ಈ ನೀರು, ನೆಲ, ಜಲ, ಗಾಳಿ ಮುಕ್ಕಾರೀ...ಬರೀ ಅಣಾನೇ ಅಲ್ಲ..ಅಣಾ ಅಂದ್ರೆ ಎಣಾನೂ ಬಾಯ್‌ಬುಡ್ತದೆ ನಿಜ...ಆದ್ರೆ ನಾವು ಬದುಕಿರೋವ್ರು...ದೇಸಾನ ಉಳಿಸ್ಯಾಕ್ರಿ...ಬೆಳಿಸ್ಯಾಕ್ರಿ.... ಅಂಗಾದ್ರೆ ಮಾತ್ರ ನಂ ಸೊತಂತ್ರ ನಂತಾವ್ ಇರ್ತೈತೆ...ಇಲ್ಲ ಅಂದೆ ನಾಯಿ ಬಾಲಾನೂ ನಮ್‌ಗೆ ಇಂಗ್ಮಾಡು ಮಗ್ನೆ ಅಂತದೆ...ಉಸಾರು......!

## ವಿರಹ

**ರಾಮನಾಥ ಜೋಶಿ**

ತವರಿಗೆ ಹೋಗಿರೆ
ಪ್ರೀತಿಯ ತುಳಸಿ
ಪತ್ರವೆ ಇಲ್ಲದೆ
ಜೀವನ ಹಳಸಿ

ಮರೆತು ಉಳಿದ ಆಕೆಯ ರವಕೆ
ತೀರಿಸದೆ ತುಸುವಾದರು ಬಯಕೆ
ನನ್ನೆದೆಗಪ್ಪುವ ವೇಳೆಯೆ ಹಾಳು
ಕುಟುಕಿತು ಅದರಲಿ ಅಡಗಿದ ಚೇಳು

# ಏರಲಿರೆ ಯಶದ ಬೆಟ್ಟ ಪೇಳುವೆನು ಅದರ ಗುಟ್ಟ

ಶಿವರಾಮ ಕಾರಂತ

ಅಂದ ಚಂದದ ಗೊಂಬೆ ಯಶದ ಬಿಂಬ
ಹಿಂದಿಲ್ಲಮುಂದಿಲ್ಲವಾದರೂ ತಾನೇ ತಾನು ಎಂಬ,
ಹಿಗ್ಗಿನಾ ಓಟದಲಿ ಜನತೆಯಾ ದಿಟ್ಟಿಯಲಿ
ಮೆರೆದಾಡಬಲ್ಲುದದು ತೂಕವಿರದೆ !
ಹುಂಬರಾ ಮನದಲ್ಲಿ 'ನಾಕವಿರುವುದು –ಮೇಲೆ,

ನರಕವಿರುವುದು ಕೆಳಗೆ' ಎಂಬ ಅರಿವು-
ನಂಬಿದರು ಬಿಟ್ಟರೂ ಎರಡೂ ಒಂದೇ-
ಮಾತು-ಕೃತಿಗಳು ಎಂಬ ದ್ವೈತ ಭಾವದಲಿ
ಕೃತಿಗಿಳಿಯೆ ನೀನಾಗ ಕೆಳಕೆಳಗೆ ಸರಿವೆ.
ಹಾಯಿಸಲು ಬಲ್ಲೆಯಾದರೆ ನಿನ್ನ ಕಣ್ಣು

ನೋಡದಿರು ನೆಲವನ್ನು, ಸುತ್ತಣದ ಜನರನ್ನು !
ಮೇಲಮೇಲಕೆ ಏರಿ ಮೆರೆವರಾರೆಂದು
ವಾಸ್ತವಿಕ ಸ್ಥಿತಿಗತಿಯ ಇಣಿಕಿಣಿಕಿ ನೋಡು
ನಿನ್ನಾಳ ಏನಿರಲಿ ; ನಿನ್ನರಿವು ಎಷ್ಟಿರಲಿ ;
ಬದುಕು ಜಂಜಡ ಭರಿತ ; ಸೊನ್ನೆ ಬೆಲೆಯು !

ನಿನ್ನ ಇಂಗಿತವನ್ನು ತೋರದಿರು ; ಸಾರದಿರು !
ಮೇಲೇರಿ ಮೆರೆಯಲ್ಕೆ ಬೇಕೇನು ಎಂದು ಅರಸು
ಒಂದೊಂದು ಕಜ್ಜದಲಿ ಆಯುಷ್ಯ ಸುಗ್ಗಾಗಿ,
ಏನು ಸಾಧಿಸಿಬಂತು ; ಎಲ್ಲಿಹುದು ಬೆಲೆಯು !
ಆಚೀಚಿನರ ನೋಡು, ಕತ್ತನೆತ್ತರಕೆ ಚಾಚು !

ಕಲಿತದ್ದು ಏನಿರಲಿ, ಅದರ ವಾಂತಿಯು ಸಲ್ಲ !
ಕಲಿಯುದೆಯೆ ಎಲ್ಲೆಲ್ಲು ಸಿಕ್ಕಿದನು ಹೆಕ್ಕು-
ಹೆಕ್ಕಿ ಹಾರಿಸು ಚಂಡು, ಒಂದರ-ಮೇಲೊಂದು
ಚೀನಿಯರ ಕೈ ಚಳಕ ಬೇಕು ಅದಕೆ !
ಗುರಿಯಿರಲಿ ನಿನ್ನದೇ-ಮೇರು ಶಿಖರ !

ಏರಲೇ ಬೇಕಿಲ್ಲ : ಏರಿದವನಂತೆ ನಟಿಸು,
ಶಾಸ್ತ್ರ, ವಿದ್ವತ್ತು, ಜ್ಞಾನವಿಜ್ಞಾನಗಳೆಲ್ಲ
ನೀನಾಡಲಿಹ ಕಣದಿ ಹರವಿ ಬಿದ್ದಿವೆ ನೋಡು,
ಅವು ನಿನ್ನ ಚಂಡುಗಳು ; ಎತ್ತಿ ನಲಿದಾಡು
ಕಸರತ್ತು, ಚಾಲಕ್ಕು, ಬೆರಗುಬರಿಸುವ ಜಾಣ್ಮೆ,

ಇವು ಮುಖ್ಯ-ಯಶದ ಪರ್ವತದಾರೋಹಣಕ್ಕೆ
ಸಣ್ಣದನು ಕಣ್ಣಿಕ್ಕಿ ಕಾಣಲೇ ಬೇಡ !
ನಿನ್ನ ಗುರಿ ತುತ್ತುದಿಯ ಶಿಖರ ; ನೋಡು !
ಸ್ಥಾನಮಾನವ ಪಡೆದು ಮೆರೆವವರ ನೋಡು !
ಪರಿಚಿತರ ಎಡೆಯಲ್ಲಿ ನಕ್ಕು ಕೈಕುಲುಕು-

ಎಲ್ಲಿಯೂ ಬಹುಕಾಲ ನಿಂತು ಕಳೆಯದೆ ಹೊತ್ತು,
ಜಿಗಿಜಿಗಿದು ನೆಗೆದಾಡು-ಗುರಿ ನೆತ್ತಿ ಮೇಲೆ-
ನಗುಮೋರೆಯನು ತಳೆದು ಆಚೀಚೆ ವಿಶ್ವಾಸ ಬಿತ್ತು,
ಆ ಜನತೆ ಕೈಕುಲುಕೆ ಬಂದೊಡನೆ-ಸಾರು,
ಏರುವುದೆ ನಿನ್ನ ಗುರಿ-ಎಂದೆಂದು ಹಾರು.

ಯಾರೇ ಕರೆಯಲಿ ನಿನ್ನ, ಒಲ್ಲೆನೆನಬೇಡ
ಕೈ ಚಾಚಿದವರನ್ನು ಮರೆತು ಸಾಗು.
ತಿಳಿದ ಒಡವೆಯ ಕಂಡು, ಆಡುವರು ನಿಜವ
ಅಂಥ ನಿಜ "ತತ್ತ್ವಮಸಿ" ಇರುವುದೇ ಸ್ವಲ್ಪ !
ಅದು ತಿಳಿದೂ ತಿಳಿಯದ ತತ್ತ್ವ : ಭಾವ ಪ್ರಪಂಚ !

ಅದೇ ನಿನ್ನ ಗುರಿಯಾಗೆ, ನೀನಾಪೆ 'ಮೇಧಾವಿ'
ಜನರ ತಲೆಬುರುಡೆಯಲಿ ತುಂಬಿರಲು ಮಿದುಳು,
ಅದಕಿಹುದು ಅರ್ಥ ಬೆಲೆ 'ಅವಿ' ಯಾದರೆ ಮಾತ್ರ,
ಇದು ನೋಡು–ಬಾಳ ಗೆಲ್ಲುವ ರೀತಿ
ಅರಿತೆಯಾದರೆ ನೀನು ನಿನಗಿಲ್ಲ ಭೀತಿ

# ಮತ್ತೊಂದು ಪ್ರಲಾಪ

ಸಿ. ಆರ್. ಸತ್ಯ.

ಸುಮಾರು ಒಂದು ವರುಷದ ಹಿಂದೆ ಪಿತ್ರಾರ್ಜಿತ ಆಸ್ತಿಯಾಗಿ ನನಗೆ ಹತ್ತಿಕೊಂಡಿರುವ ಕರಿಬಣ್ಣದ ಬಗ್ಗೆ ಇದೇ ಅಪರಂಜಿಯಲ್ಲಿ ಒಂದು ಪ್ರಲಾಪವನ್ನ ಬರೆದಿದ್ದೆ. ಅದರ ಪ್ರಕಟಣೆಯ ನಂತರ ಅನೇಕ ವಾಚಕರು ತಮ್ಮ ಸಹಾನುಭೂತಿಯನ್ನ ವ್ಯಕ್ತಪಡಿಸಿದರು. ಒಬ್ಬಾಕೆಯಂತೂ ನನ್ನ ಕಪ್ಪುತನ ಮುಖ್ಯವಲ್ಲ-ಗುಣಮುಖ್ಯ-ನಿನ್ನನ್ನ ಮದುವೇನೇ ಆಗ್ತೀನಿ–ಅಂತಲೂ ಬರೆದಿದ್ದರು. ಗಾಡ್ ಬ್ಲೆಸ್ ಹರ್.

ಅದೆಲ್ಲಾ ಹಳೇ ಕತೆ, ಈಗೇನಪ್ಪಾ ನಿನ್ನ ಹೊಸ ಪ್ರಾಬ್ಲಮ್, ಏನಾದರೂ ರ್‍ಯಾಬಿಸ್ ನಾಯಿ ಕಚ್ಚಿತೇ ನಿನಗೆ ? ಅಂತ ನೀವು ನನ್ನ ಈಗ ಕೇಳಬಹುದು.

ಪ್ಲೀಸ್ ಹೋಲ್ಡ್ ಆನ್. ಈಗ ನಾನು ಹೇಳೋ ಪ್ರಾಬ್ಲಮ್ಮು ಹೊಸದಲ್ಲ, ಹಳೆಯದೆ ! ಅಂದರೆ, ನಾನು ಹುಟ್ಟಿದ ನಂತರ ಮೂರು ತಿಂಗಳುಗಳಿಂದಲೇ ಶುರುವಾದುದು ! ಸಂಕ್ಷಿಪ್ತವಾಗಿ ಹೇಳಬೇಕಾದರೆ ನನ್ನ ಪ್ರಾಬ್ಲಮ್ಮು ನನ್ನ ಕೋರೆ ಹಲ್ಲುಗಳದ್ದು. ಎಡಕ್ಕೊಂದು, ಬಲಕ್ಕೊಂದು ಬಾಯಿಯಿಂದ ಹೊರಗೆ ಭೇಧಿಸಿಕೊಂಡು ಒಳ್ಳೇ ಸಲಗದ ಆನೆಯ ತರಹದ ಕೊಂಬುಗಳಾಗಿ ನಿಂತಿವೆ. ಇದರಿಂದ ನನ್ನ ದೇಹಸ್ಥಿತಿ ಆನೆಯ ತರಹ ಇದ್ದರೂ ಮನೋ : ಸ್ಥಿತಿ ಹದಗೆಟ್ಟಿದೆ.

ನನಗೆ ಕೋರೇ ಹಲ್ಲುಗಳಿರೋದು ನನ್ನ ತಪ್ಪೆ ? ನಾನೇನು ಅವುಗಳನ್ನ ಗೊಬ್ಬರ ಹಾಕಿ ಇಷ್ಟು ದೊಡ್ಡದಾಗಿ ಬೆಳೆಸಿಕೊಂಡಿದ್ದೇನೆಯೆ ? ಇಲ್ಲಾ, ನಾನೇನು ರಾಕ್ಷಸ ಕುಲದವನೆ ? ನಿಮ್ಮ ತರಹವೇ ಮನುಷ್ಯನಲ್ಲವೆ ? ಮತ್ಯಾಕೆ ಕೆಲವರಿಗೆ ನನ್ನನ್ನ ನೋಡಿದರೆ ನಗು, ತಾತ್ಸಾರ, ಭಯ ಅಂತೀನಿ ?

ನನಗೆ ಮೂರೇ ತಿಂಗಳು ವಯಸ್ಸಾಗಿದ್ದಾಗ ನನಗೆ ತೊಟ್ಟಿಲು ತೂಗೋಕ್ಕೆ ಅಂತ ಬರ್ತಿದ್ದ ಪಕ್ಕದ ಮನೆಯ ರಂಗಮ್ಮನವರು ನಾನು ನಗೋದು ನೋಡಿ, "ಈ ಮಗು ಲಂಕೆಯಲ್ಲಿ ರಾಮಾಯಣದ ಸಮಯದಲ್ಲಿ ಹುಟ್ಟಬೇಕಿತ್ತು" ಅಂತ ಪಿಸುಗುಟ್ಟಿದ್ದು ನಮ್ಮಮ್ಮನಿಗೆ ಕೇಳಿಸಿ ಅವರನ್ನ ಮನೆ ಬಿಟ್ಟು ಓಡಿಸಿದ್ದರಂತೆ.

ಆದಾದ ಮೇಲೆ ನಾನು ಎಲ್ಲರ ತರಹ ಬೆಳೆದರೂ ಇವೆರಡು ಕೋರೆ ಹಲ್ಲುಗಳು ಮಾತ್ರ ಸ್ವಲ್ಪ ಅರ್ಜೆಂಟಾಗೇ ಬೆಳೆಯೋಕ್ಕೆ ಶುರುಮಾಡಿದ್ದು.

ಸುಮಾರು ಐದು ವರ್ಷಗಳ ಹೊತ್ತಿಗೆ ನನ್ನ ಬಾಯಿಂದ ಹೊರಗೆ ಅವೆರಡೂ ನಕ್ಕಲಿ ಬಿಡಲಿ ಕಾಣಿಸಿಕೊಳ್ಳೋಕೆ ಶುರುವಾದಾಗ, ನನ್ನ ಕ್ಲಾಸಿನಲ್ಲಿದ ಇತರೇ ಮಕ್ಕಳು (ಟೀಚರ್ರೂ ಸೇರಿ) ನನ್ನಿಂದ ದೂರವಾಗಿರ್ತಿದ್ದರಂತೆ ಹತ್ತು ವರುಷಗ ಳಾಗೋ ಹೊತ್ತಿಗೆ ಹೆಡ್‌ಮಿಸ್ಟ್ರೆಸ್ ಸಹಿತಾ ನನ್ನನ್ನ ನೋಡಿ ಹೆದರ್ತಿದ್ದರಂತೆ, ಈ ಮಧ್ಯೆ ಸ್ಕೂಲ್ ಡೇ ಆದಾಗ ಬ್ಯಾಲೆ ನಾಟಕದಲ್ಲಿ ನನಗೆ ರಾವಣನ ಪಾತ್ರ, ಮೊಸಳೆ ಕೋತಿ (ಪಂಚತಂತ್ರ ಜ್ಞಾಪಕ ಇದೆಯೇ ?) ನಾಟಕದಲ್ಲಿ ಮೊಸಳೆ ಪಾತ್ರ, ಗಜೇಂದ್ರ ಮೋಕ್ಷದಲ್ಲಿ-ನೀವು ಸರಿಯಾಗೇ ಊಹಿಸಿದ್ರಿ ಆನೆ ಪಾತ್ರ ಇವೆಲಾ-ಮೇಕಪ್ ಇಲ್ಲ ದೇನೆ ನನಗೆ ಮೀಸಲಾಗಿಟ್ಟಿದ್ದರು.

ಮೇಲ್ಕಂಡ ಮಾನಸಿಕ ಒತ್ತಡ ಹಾಗೂ ತಿರಸ್ಕಾರದಿಂದ ನಾನು ಎ ಸ್ಸೆ ಸ್ಸೆ ಲ್ಸಿ ಯಲ್ಲಿ ಮೂರನೇ ತರಗತಿಯಲ್ಲಿ ಪಾಸಾದರೂ "ಡೆಂಟಲೀ ಹ್ಯಾಂಡಿಕ್ಯಾಪ್ಡ್" ಅಂತ ಕಾಲೇಜಿನಲ್ಲಿ ಪ್ರವೇಶ ಸಿಕ್ತು.

ಆ ವರುಷ ಕಾಲೇಜ್‌ಡೇಗೆ ಸ್ವಲ್ಪ ದಿನಗಳಿವೆ ಅನ್ನೋವಾಗ ನನ್ನ ಇಂಗ್ಲಿಷ್ ಲೆಕ್ಚರರು ನನ್ನನ್ನ ಸ್ಟಾಫ್‌ರೂಮಿಗೆ ಕರೆದರು. "ಕಾಲೇಜ್ ಡೇಗೆ 'ಹಾರರ್ ಆಫ್ ಡ್ರಾಕುಲಾ' ಡ್ರಾಮಾ ಮಾಡ್ತಿದೀವಿ. ನೀವೂ..." ಅಂತ ಅವರು ಹೇಳೋಕ್ಕೆ ಮುಂಚೇನೇ ನಾನು "ನೋ ಪ್ರಾಬ್ಲಮ್ ಮಿಸ್ ನಾನೇ ಡ್ರಾಕುಲ ಪಾಟ್ ಮಾಡ್ತೀನಿ" ಅಂತ ಹೇಳಿದೆ. ಬೆಸ್ಟ್ ಆಕ್ಟರ್ ಅಂತ ಒಂದು ಸರ್ಟಿಫಿಕೇಟ್ ಬೇರೇ ಕೊಟ್ರು ! ಅಂತೂ ಹೇಗೋ ಡಿಗ್ರಿ ಮುಗಿಸಿದ ಮೇಲೆ ಕಾಲೇಜಿನಲ್ಲಿ ಫೇರ್‌ವೆಲ್ ಸಮಾರಂಭ ಮಾಡಿದಾಗ, ನಮ್ಮೆಲ್ಲರ ಗ್ರೂಪ್ ಫೋಟೋ ಸಮಯ ಬಂತು. ಫೋಟೋಗ್ರಾಫರ್ ಎಲ್ಲರನ್ನೂ ನಿಲ್ಲಿಸಿ, ರೆಡಿ ಮಾಡಿ ನನ್ನ ಕಡೆ ಮಾತ್ರ ಕೈಮಾಡಿ, ನೀವೊಬ್ರು ಬಿಟ್ಟು ಮಿಕ್ಕದವರೆಲ್ಲಾ Smile ಮಾಡೀ, ಹಾಗೇ.....ಗುಡ್ ! ಅಂತ ಫೋಟೋ ತೆಗೆದ. (ಅವನ ತಪ್ಪಲ್ಲ ಬಿಡಿ.)

ಡಿಗ್ರಿ ಕೈನಲ್ಲಿ ಹಿಡಿದುಕೊಂಡು ಕೆಲಸವಿಲ್ಲದೆ ಅಲೆಯೋ ಸಮಯ ಬಂತು. ಇಂಟರ್ ವ್ಯೂಗಳಿಗೆ ಹೋದರೆ ನನ್ನನ್ನ ಕೇಳೋ ಪ್ರಶ್ನೆಗಳು ಹ್ಯಾಗಿದ್ದವು ಅಂತೀರಿ ? ಸ್ಯಾಂಪಲ್‌ಗಳನ್ನ ನೋಡಿ ;–

"ನೀವು ಗಿನ್ನೆಸ್ ರಿಕಾರ್ಡಿಗೆ ಅಪ್ಲೈ ಮಾಡಿದೀರಾ ?" (ಲಾಂಗೆಸ್ಟ್ ಹಲ್ಲು ಅಂತ ಇರಬೇಕು)

"ನೀವು ಟೂತ್ ಬ್ರಶ್ ಉಪಯೋಗಿಸ್ತೀರೋ ಇಲ್ಲಾ ಯಾವುದಾದರೂ ಮರದ ಕೊಂಬೇನಾ ಉಪಯೋಗಿಸ್ತೀರೊ ?" (ಇದು ಫಾರೆಸ್ಟ್ ಡಿಪಾರ್ಟ್‌ಮೆಂಟಲ್ಲಿ ಆತಂಕದಿಂದ ಮೂಡಿ ಬಂದ ಪ್ರಶ್ನೆ.

"ಒಂದು ಮೊಳದುದ್ದ ಕಬ್ಬಿನ ಬಿಲ್ಲೆಯನ್ನು ನಿಮ್ಮ ಕೈಗಿಟ್ರೆ ಎಷ್ಟು ಬೇಗ ಅದರಲ್ಲಿರೋ ಜ್ಯೂಸ್ ಹೀರ್ತಿರಾ ?" (ಇದು ಮಂಡ್ಯದ ಶುಗರ್ ಫಾಕ್ಟರಿಯಲ್ಲಿ ಕೇಳಿದ್ದು)

"ನೀವು ಕೋಪಿಸ್ಕೊಂಡು ಹಲ್ಲು ಕಡಿದರೆ ಮನೇಗೆಲ್ಲಾ ಶಬ್ಧ ಕೇಳುತ್ತೆ ?" (ಈ ಪ್ರಶ್ನೆ ಯಾವನೋ ನರ್ಸಿಂಗ್ ಹೋಂನಲ್ಲಿ ಕೇಳಿದ್ದು)

"ಮೊನ್ನೆ ಸರ್ಕಸ್ಸಿನಲ್ಲಿ ಹಲ್ಲಿಗೆ ಹಗ್ಗ ಕಟ್ಕೊಂಡು ಒಬ್ಬ ಒಂದು ಲಾರಿಯನ್ನು ಎಳೆದದ್ದು ನೋಡಿದೆ. ಬೈ ಎನಿ ಚಾನ್ಸ್, ಅವನು ನೀವೇ ಏನ್ರೀ ? (ಇದು ಒಬ್ಬ ಚಿತ್ರ ನಿರ್ಮಾಪಕರು ಕೇಳಿದ್ದು ಇತ್ಯಾದಿ, ಇತ್ಯಾದಿ ಪ್ರಶ್ನೆಗಳು.)

ಇವಕ್ಕೆಲ್ಲಾ ನಾನೇನು ಉತ್ತರ ಹೇಳಲಿ. ?

ಸ್ವಲ್ಪ ದಿನಗಳ ಕೆಳಗೆ ಜೀವನವೇ ಬೇಸತ್ತು ಹೋಗಿ ಯಾವುದಾದರೂ ಕಾಡಿಗಾದರೂ ಹೋಗೋಣ ಅಂತ ಬಿಳಿಗಿರಿರಂಗನ ಬೆಟ್ಟದ ಬಳಿ ಹೋದೆ. ತಕ್ಷಣ ನನ್ನ ಸುತ್ತಲೂ ಎಂಟು ಹತ್ತು ಜನ ಘಟಾನುಘಟಿಗಳು ಕೈಲಿ ಬಂದೂಕಗಳನ್ನ ಹಿಡಿದುಕೊಂಡು ನನ್ನನ್ನ ಸುತ್ತುವರೆದು ನಿಲ್ಲಿಸಿದರು. ನಾನು ಗಡಾಗಡಾ ಅಂತ ನಡುಗ್ತಿದ್ದೆ. ಅವರೆಲ್ಲರ ನಾಯಕ ಅಂತ ಕಾಣುತ್ತೆ, ಉದ್ದಕ್ಕೆ ಕಪ್ಪಕೆ ದೊಡ್ಡ ಮೀಸೆ ಬಿಟ್ಕೊಂಡಿದ್ದ.

"ಯಾರಡಾ ನೀ ? ಇಂಗೆ ಎದುಕೆ ವಂದಿರ್ಕೆ ?" ಅಂತ ತಮಿಳಿದಲ್ಲಿ ಕೇಳಿದ. ನನ್ನ ಕತೆಯನ್ನೆಲ್ಲಾ ಹೇಳ್ಕೊಂಡೆ. ಪಾಪ, ಎಲ್ಲಾ ಕೇಳಿ. ಕನ್ನಡದಲ್ಲೇ ಯಾವುದೋ ಆನೆ ಅಂದ್ಕೊಂಡು ಗುಂಡು ಹಾಕಿ ಹೊಡೆದು ಹಾಕ್ತಿದ್ವಿ ಅದೃಷ್ಟ ಇತ್ತು ಬದುಕ್ಕೊಂಡೆ !" ಅಂತ ಬೆನ್ನು ತಟ್ಟಿದ.

ನೀವು ಯಾರು ಸಾರ್" ಅಂದೆ.

"ನನ್ನ ಹೆಸರು ವೀರಪ್ಪನ್" ಅಂದ.

ಅಂದಿನಿಂದ ಇದುವರೆಗೂ ನನಗೆ ಇನ್ನೂ ಯಾವ ಕೆಲಸವೂ ಸಿಕ್ಕಿಲ್ಲ ನೋಡಿ ಇನ್ನೂ ಎಷ್ಟು ದಿನಗಳು ಬರೀ ಹಲ್ಲು ಇಟ್ಕೊಂಡು ಹೊಟ್ಟೆಗೆ ಹಿಟ್ಟಿಲ್ಲದೇ ಬದುಕಿರಲು ಸಾಧ್ಯ ಅಂತೀನಿ ? ಹಲ್ಲುಗಳಿಗಾದರೂ ಸ್ವಲ್ಪ ವ್ಯಾಯಾಮ ಬೇಡವೆ ?

ಈ ನನ್ನ ಇನ್ನೊಂದು ಪ್ರಲಾಪವನ್ನು ಓದಿ ನಮ್ಮ ಅಪರಂಜಿ ಓದುಗರು ನನಗೆ ಯಾವುದಾದರೂ ಕೆಲಸ ಕೊಟ್ಟು ಪುಣ್ಯ ಕಟ್ಟಿ ಕೊಳ್ಳಿ ಅಂತ ನನ್ನ ಬೇಡಿಕೆ. ದಯವಿಟ್ಟು ನನಗೆ ಒಂದು ಖಾಯಂ ಕೆಲಸ ಕೊಡಿಸಿ.

ಯಾಕೇಂದ್ರೆ, ಟೆಂಪರರಿಯಾಗಿ ನಮ್ಮ ಪಕ್ಕದಲೇ ಇರೋ ಸೌದೇಅಂಗಡಿಯವರು ಆಗಲೇ ಸೌದೇ 'ಕಡೆಯೋ' ಕೆಲಸ ಆಫರ್ ಮಾಡಿದಾರೆ (without ಕೊಡಲಿ!)
ತ್ಯಾಂಕ್ಯೂ......

## ಧಂದೆ

**ರಾಮನಾಥ ಜೋಶಿ**

ನೀನು ವೈದ್ಯನಾದಂದೆ
ತೆರೆಯುವಿಯಲೆ ಧಂದೆ
ಇಡುವೆ ನಾ ಸೌದೆಯಂಗಡಿ ಅದರ ಮುಂದೆ

ಸತ್ತ ನಿನ್ನ ರೋಗಿಗಳಿಗೆಂದೆ
ನಿನ್ನ ವೃತ್ತಿಯ ಭವಿತವ್ಯ ಹೇಳುವುದು ಕಷ್ಟ
ನನ್ನ ಧಂದೆಯದು ಕುದುರುವುದು ಸ್ಪಷ್ಟ

# ಕಾಲ

**ಪಂಡಿತ ಚಂದ್ರಕಾಂತ್**

**ಇ**ದೊಂದು ಸತ್ಯ ಕಥೆ. ಹಾಗಾಗಿ ಇದನ್ನು ನಂಬುವುದು ಕಷ್ಟ. ಮಾನವ ಚರಿತ್ರೆಯ ಹಲವು ಪ್ರಸಂಗಗಳು ನಮ್ಮನ್ನು ಇಂತಹ ಸ್ಥಿತಿಯಲ್ಲಿ ನಿಲ್ಲಿಸುತ್ತದೆ. ಇದು ನಡೆದದ್ದು ನಿಜ ಎಂದು ಚರಿತ್ರಕಾರರು ಸಾರಿ ಸಾರಿ ಹೇಳಿದರೂ ನಾವು ಅವರ ಮಾತಿಗೆ ತಲೆ ಹಾಕಿದರೂ ಮನಸ್ಸಿನಲ್ಲೇ ಹೀಗೂ ಉಂಟೇ ಎಂದು ನಮ್ಮನ್ನು ನಾವೇ ಕೇಳುತ್ತೇವೆ. ಸತ್ಯವನ್ನು ನಂಬುವುದು ಕಷ್ಟ ಎಂದೇ ಬಹಳ ಜನ ಸುಳ್ಳು ಹೇಳುತ್ತಾರೋ ಏನೋ ಗೊತ್ತಿಲ್ಲ.

ಸೀತೆಯ ಅಗ್ನಿ ಪರೀಕ್ಷೆ, ದ್ರೌಪದಿಯ ವಸ್ತ್ರಾಪಹರಣ, ಚಾಣಕ್ಯನ ಜಾಣ್ಮೆ, ಶಿವಾಜಿಯ ವಿಜಯ, ಸುಭಾಸಚಂದ್ರರ ಸಾಹಸ, ಗಾಂಧೀಜಿಯವರ ಹತ್ಯೆ, ರಾಜೀವ ಗಾಂಧಿಯಂತವರು ಪ್ರಧಾನಿಯಾದದ್ದು, ಭಾರತ ಇನ್ನೂ ಸ್ವತಂತ್ರ್ಯ ರಾಷ್ಟ್ರವಾಗಿ ಪ್ರಜಾಪ್ರಭುತ್ವದ ಮಾರ್ಗದಲ್ಲೇ ನಡೆಯುತ್ತಿರುವುದು. ರಾಜ್‌ಕುಮಾರ್‌ರಂತಹ ನಟ ಇನ್ನೂ ಕನ್ನಡದ ಚಿತ್ರಗಳಲ್ಲೇ ಉಳಿದಿರುವುದು, ಎಲ್ಲವೂ ಸತ್ಯ ವಿಚಾರವೇ. ಆದರೆ ನಂಬುವುದು ಕಷ್ಟ.

* * * *

ಸರೋಜ ಮತ್ತು ಶಾಂತಮ್ಮ ನನ್ನ ಜೊತೆ ಪ್ರೈಮರಿಯಿಂದ ಹೈಸ್ಕೂಲ್ ವರೆಗೆ ಓದಿದವರು. ನಾನು ಇಂಟರ್ ಮುಗಿಸಿ ಡಿಗ್ರಿಗೆ ಸೇರುವ ವೇಳೆಗೆ ಇವರ ಮದುವೆಯಾಗಿತ್ತು. ನಾನು ಬೆಂಗಳೂರಿನಿಂದ ಡಿಗ್ರಿ ಮುಗಿಸಿಕೊಂಡು ಊರಿಗೆ ಹಿಂತಿರುಗುವಾಗ ಇಬ್ಬರ ಕೈಯಲ್ಲೂ ಒಂದೊಂದು ಮಗು ಆಡುತ್ತಿತ್ತು. ಶಾಂತಮ್ಮ ತನ್ನ ಕೈಯಲ್ಲಿದ್ದ ಮಗುವಿಗೆ ತಮ್ಮನನ್ನೋ ತಂಗಿಯನ್ನೋ ಕೊಡುವ ಸ್ಥಿತಿಯಲ್ಲಿದ್ದಳು. ನನಗೆ ನಂತರ ಕೆಲಸ ಸಿಕ್ಕಿ ನನ್ನಂತಹವನಿಗೂ ಯಾರೋ ಅಮಾಯಕರು ಹೆಣ್ಣು ಕೊಟ್ಟು ನನ್ನನ್ನು ಉದ್ಧಾರ ಮಾಡುವ ಹೊತ್ತಿಗೆ ಇವರುಗಳ ಮಕ್ಕಳು ಶಾಲೆಯನ್ನು ಸೇರಿದ್ದವು.

ಬಲೇ ಮುದ್ದಿನ ಮಕ್ಕಳು. ಸರೋಜನ ಮಗ ವಸಂತ, ಶಾಂತಮ್ಮನ ಮಗ ಪ್ರಾಣೇಶ. ನನ್ನನ್ನು 'ಮಾವ' 'ಮಾವ' ಎಂದು ಕೂಗಿ ನನ್ನ ಸೈಕಲ್ ಮೇಲೆ ಕೂರುತ್ತಿದ್ದ ದಿನ ಇನ್ನೂ ನೆನಪಿದೆ. ಈ ಇಬ್ಬರು ಮಕ್ಕಳು ನಾನು ಮತ್ತು ಅವರ

ತಾಯಂದಿರು ಸೇರಿದ ಶಾಲೆಗೇ ಸೇರಿದವು. ಕಾರಣ ಊರಿನಲ್ಲಿ ಆಗ ಕೂಡ ಇದ್ದದ್ದು ಒಂದೇ ಶಾಲೆ. ವಸಂತನ ಜಾಣತನ, ಪ್ರಾಣೇಶನ ತುಂಟತನ ಮತ್ತು ಹಾಡಿನ ಹುಚ್ಚು ಕುರಿತಾದ ಮಾತುಗಳು ನಮ್ಮ ಮನೆಯಲ್ಲಿ ಆಗಾಗ ಕೇಳಿ ಬರುತ್ತಿತ್ತು. ಅಮ್ಮಂದಿರಿಗಿದ್ದ ಆತ್ಮೀಯತೆಯನ್ನು ಈ ಮಕ್ಕಳು ಕೂಡ ಹೊತ್ತುಕೊಂಡಿದ್ದವು. ಶಾಲೆಯಲ್ಲೇ ಒಳ್ಳೆಯ ಸ್ನೇಹದ ಜೋಡಿಗಳಾಗಿದ್ದವು. ಅವರಿಬ್ಬರೂ ಒಟ್ಟಿಗೆ ಶಾಲೆಗೆ ಹೋಗುವುದನ್ನು ಕಂಡಾಗ, ನಾನು ಮತ್ತು ಅವರ ತಾಯಂದಿರು ಅದೇ ಬೀದಿಯಲ್ಲಿ ಅದೇ ಶಾಲೆಗೆ ಹೋಗುತ್ತಿದ್ದ ದಿನ ನೆನಪಾಗುತ್ತಿತ್ತು. 'History Repeats' ಎಂದರೆ ಇದೇನಾ ಎಂದು ಅಂದು ನನ್ನನ್ನು ನಾನೇ ಕೇಳಿ ಕೊಳ್ಳುತ್ತಿದ್ದೆ (ಅದರ ಅರ್ಥವೇ ಬೇರೆ ಎಂಬ ತಿಳುವಳಿಕೆ ಬಹಳ ದಿನದ ನಂತರ ಬಂದಿತು.)

ಸರೋಜನ ಗಂಡ ಸರಕಾರದ ಒಳ್ಳೆಯ ಹುದ್ದೆಯಲ್ಲಿದ್ದವರು. ಮಿತ ಭಾಷಿ, ಮೃದು ಭಾಷಿ, ಆದರೆ ಅವರೊಂದು ತರಹದ ಠೀವಿ, ನನ್ನನ್ನು ಕೊಂಚ ಮುಜು ಗರಕ್ಕೆ ಹಾಕುತ್ತಿತ್ತು. ಅವರನ್ನು ಬಹಳ ಗೌರವದಿಂದ ಕಾಣುತ್ತಿದ್ದೆ. ಹಾಗೆ ಕೊಂಚ ದೂರವೂ ಇರುತ್ತಿದ್ದೆ. ಒಳ್ಳೆಯ ಸದ್ ಗೃಹಸ್ಥ. ಶಾಂತಮ್ಮನ ಗಂಡ ನಮ್ಮ ಪಕ್ಕದ ಊರಿನಲ್ಲೂ, ಶಾಲೆಯಲ್ಲೂ, ಕೆಲಸ ಮಾಡುವವ, ಮಾತಿನಲ್ಲೂ ಬಹಳ ನಮ್ರತೆ, ಆತ್ಮೀಯತೆ, ಹಾಗೂ ಸ್ನೇಹಮಯಿ ಎಂಬುದು ಎದ್ದು ಕಾಣುವ ವಿಚಾರ. ತನ್ನ ಆತ್ಮೀಯತೆಯನ್ನು ನಿರ್ವಂಚನೆಯಿಲ್ಲದೆ, ನಾಳೆಗೆ ಬೇಕೆಂಬ ಭಯವಿಲ್ಲದೆ ಧಾರಾಳ ವಾಗಿ ಉಪಯೋಗಿಸುವ ವ್ಯಕ್ತಿ. ಒಳ್ಳೆಯ ಸಂಭಾವಿತ ಸದ್ ಗೃಹಸ್ಥ.

ಕಾಲ ಕಳೆದಂತೆ ಹಲವು ಬದಲಾವಣೆಗಳಾದವು.
ಸರೋಜಮ್ಮನಿಗೆ ಸ್ವಂತ ಮನೆ, ಮನೆಯಲ್ಲೂ ಚಿನ್ನ ಬೆಳ್ಳಿಯಿಂದ ಎಲ್ಲರಿಗೂ ಕಾಣು ವಂತಹ ಸ್ಥಿತಿಗೆ ಬಂದರು. ಶಾಂತಮ್ಮನ ಮನೆಯಲ್ಲಿ ಪ್ರಾಣೇಶನ ನಂತರ ಬಂದ ಇಬ್ಬರು ತಮ್ಮಂದಿರು ಇಬ್ಬರು ತಂಗಿಯರನ್ನು ಬಿಟ್ಟರೆ ಮತ್ತಾವ ಬದಲಾವಣೆ ಯಿಲ್ಲ, ಸರೋಜ ಇವಳ ಮಕ್ಕಳನ್ನು ಬೆಳೆಸಿದಳು ಎಂದರೆ ತಪ್ಪಾಗಲಾರದು. ಸ್ನೇಹ ಮತ್ತು ಆತ್ಮೀಯತೆಯ ಮಧ್ಯ ಸ್ಥಿತಿ ಗತಿ ಬರಲಿಲ್ಲ. ಸುತ್ತಲಿನ ಬದಲಾವಣೆಯನ್ನು ಗಮನಿಸದೇ ವಸಂತ, ಪ್ರಾಣೇಶ ಮುಂದೆ ನಡೆದರು. ಹೈಸ್ಕೂಲಿನ ಸ್ಪರ್ಧೆಗಳಲ್ಲೂ ಪ್ರಾಣೇಶನದೇ ಸಿಂಹಪಾಲು. ಆಟ ಮತ್ತು ಹಾಡಿನಲ್ಲಿ, ವಸಂತ ಪಾಠದಲ್ಲೂ ಶಾಲೆಗೇ ಮೊದಲು. ಇವರುಗಳು ಹೈಸ್ಕೂಲಿನಲ್ಲಿರುವಾಗ ಬೇರೆ ಕೆಲಸಕ್ಕೆಂದು ನಾನು ಊರು ಬಿಟ್ಟು ಬೆಂಗಳೂರು ಸೇರಿದೆ. ಅಂದು ನಾನು ಊರು ಬಿಟ್ಟು ಹೊರಟಾಗ ನನ್ನನ್ನು ನನ್ನಾಕೆ

ಯನ್ನು ರೈಲ್ವೆ ನಿಲ್ದಾಣದಲ್ಲಿ ಬೀಳ್ಕೊಟ್ಟು ಅವರ ಭಾವವನ್ನು ನಾನು ಇಂದಿಗೂ ಮರೆಯಲಾರೆ. ಅವರು 'ಮಾವ ಮಾವ' ಎಂದು ಕೈ ಬೀಸುವಾಗ ಹೇಳಿದ್ದು ಇನ್ನೂ ಕಿವಿಯಲ್ಲಿ ಕೇಳುತ್ತಿದೆ.

ಕಾಲ ಉರುಳುತ್ತಾ ನಡೆಯುತ್ತದೆ. ಒಂದು ದಿನ ಬೆಂಗಳೂರು ರಸ್ತೆಯಲ್ಲಿ ಸರೋಜ ಮತ್ತು ಅವಳ ಗಂಡ ಸಿಕ್ಕರು. "ಏನೋ ಗೊತ್ತಾಗಲಿಲ್ಲವೇ" ಎಂದು ಕೇಳಿದಾಗ ಅವಳ ಧ್ವನಿ ಕೊಂಚವೂ ಬದಲಾಗದೆ ಇದ್ದುದರಿಂದ ಇವಳು ಸರೋಜ ಎಂದು ಅರಿತೆ.

ವಯಸ್ಸು ಮತ್ತು ಹೆಂಗಸು ಒಳ್ಳೆಯ ಆತ್ಮೀಯ ಸ್ನೇಹಿತರು. ಹೆಂಗಸರಿಗೆ ವಯಸ್ಸಾಗುತ್ತಿದ್ದಂತೆ ಅವರಲ್ಲಾಗುವ ಬದಲಾವಣೆ ವಿಪರೀತವಾದದ್ದು. ಪ್ರಾಯಶಃ ನಮ್ಮ ಸರೋಜಳ ಮೇಲೆ ಕಾಲಕ್ಕೆ ಬಹಳ ಆಸಕ್ತಿಯಿದೆಯೆಂದು ಕಾಣುತ್ತದೆ. ಅವಳ ಧ್ವನಿಯ ವಿನಃ ಅವಳನ್ನು ಸಂಪೂರ್ಣವಾಗಿ ತನ್ನದಾಗಿಸಿ ಕೊಂಡು ಬದಲಿಸಿತ್ತು. ಪ್ರಾಯಶಃ ನಾಳೆ ತನಗೂ ಮತ್ತು ಸರೋಜಳಿಗೂ ಇರುವ ವ್ಯತ್ಯಾಸ ತನಗೇ ತಿಳಿಯದೆ ಹೋದಿತೆಂದು ಧ್ವನಿಯನ್ನು ಮಾತ್ರ ಹಾಗೇ ಉಳಿಸಿತ್ತು ಎಂದು ಕಾಣುತ್ತದೆ. ಹೀಗಾಗಿ ನಾನು ಅವಳನ್ನು ಗುರುತು ಹಿಡಿದೆ.

ಬೀದಿಯಲ್ಲೇ ಮಗನ ಪ್ರಗತಿ, ಅವನು ಬಿ. ಇ. ಮುಗಿಸಿರುವುದು, ಒಂದು ಸರ್ಕಾರಿ ಕೆಲಸ ಸಿಕ್ಕಿರುವುದು, ಅವನಿಗೆ ತುಂಬ ಒಳ್ಳೆಯ ಮಾರ್ಕ್ಸ್ ಬಂದಿರುವುದು, ಆದರೂ ಕೂಡ ಬೆಂಗಳೂರಿನಲ್ಲಿ ಯಾರನ್ನೋ ಹಿಡಿದು ಕೆಲಸ ಗಿಟ್ಟಿಸಿ ಕೊಂಡಿರುವುದು, ಪಾಪ ಶಾಂತಮ್ಮನ ಮಗ ಪ್ರಾಣೇಶ ಪಿ.ಯು.ಸಿ. ಪರೀಕ್ಷೆಯನ್ನು ಎರಡು ಸಾರಿ ತೆಗೆದು ಕೊಂಡಿದ್ದು, ಈಗ ಬಿ.ಎ. ಪರೀಕ್ಷೆ ತೆಗೆದು ಕೊಂಡಿರುವುದು, ಈಗಲೂ ಸಿನೆಮಾ, ಹಾಡು ಎಂದು ಹೇಳಿ ಹಾಯಾಗಿರುವುದು. ಸರೋಜಳ ಗಂಡ ಆಗಾಗ್ಗೆ ಪತ್ನಿಯ ಮಾತಿಗೆ ಒಳ್ಳೆಯ ಕಾಮೆಂಟರಿ ಕೊಟ್ಟರು. ಅವರ ಸುಖ, ಸಂತಸ, ಉತ್ಸಾಹ ಕಂಡು ಕ್ಷಣ ಮಾತ್ರ ತಿಂಗಳು ಕೊನೆಯ ವಾರದ ಚಿಂತೆಯನ್ನು ಮರೆತು ನಿಂತೆ. ಇನ್ನೇನಾದರೂ ಮಾತನಾಡುವುದರಲ್ಲಿ ಅವರಿಗೆ ಬೇಕಾದ ಬಸ್ಸು ಬಂದು ಅವರು ಓಡಿ ಹತ್ತಿದರು. ಅಪರೂಪಕ್ಕೆ ಆ ಬಸ್ಸು ಖಾಲಿಯಿದ್ದರಿಂದ ಮುಂದಿನ ಬಸ್ಸಿಗೆ ಹೋಗಿ ಎಂಬ ಧೈರ್ಯ ನಾನು ತೋರಿಸಲಿಲ್ಲ. ಅವರು ಹೋದ ನಂತರ ನಂತರ ಶಾಂತಮ್ಮನನ್ನು ನೋಡಿ ಬರಬೇಕು ಎನ್ನಿಸಿತು. ಹಾಗೂ ನನ್ನ ಮನಸ್ಸಿನಲ್ಲಿ

ಒಂದು ಪ್ರಶ್ನೆ ಸುಳಿದು ಹೋಯಿತು. "ಎಲ್ಲಾ ಸರಿ ನನ್ನ ಬಗ್ಗೆ ಏನೂ ಕೇಳಲೇ ಇಲ್ಲವಲ್ಲ" ಎಂದು. ಶಾಂತಮ್ಮನನ್ನು ನೋಡುವ ತನಕ ಅದನ್ನೂ ಮರೆಸಿತ್ತು.

ಮೂರು ತಿಂಗಳ ನಂತರ ನಾನೇ ಕಾಗದ ಬರೆದು ಊರಿಗೆ ಹೊರಟೆ. ಜೊತೆಗೆ ನನ್ನಾಕೆ. ಪ್ರಾಯಶಃ ಮದುವೆಯನಂತರ, ಇಬ್ಬರು ಮಕ್ಕಳು ಬಂದ ಮೇಲೆ ನಾವಿಬ್ಬರೂ ಈ ರೀತಿ ಪ್ರಯಾಣ ಹೊರಟಿದ್ದು ಇದೇ ಮೊದಲ ಬಾರಿ. ನನಗೆ ಊರನ್ನು ನೋಡುವ ತನಕ ಅವಳಿಗೆ ಇಷ್ಟು ದಿನದ ಮೇಲಾದರೂ ಒಂದು ಪ್ರಯಾಣ ಬಂತಲ್ಲಾ ಎಂಬ ಸಮಾಧಾನ.

ನಮ್ಮ ಊರು ಹತ್ತಿರವಾಗುತ್ತಿದ್ದಂತೆ, ನನ್ನಾಕೆ ಕೇಳಿದಳು. ಮೊದಲು ಯಾರ ಮನೆಗೆ ಹೋಗುವುದು ಎಂದು. ರಾಮು ಬಂದಿರುತ್ತಾನೆ. ಮೊದಲು ಅವರ ಮನೆಗೆ ಹೋಗಿ ನಂತರ ಇವರಿಬ್ಬರನ್ನೂ ನೋಡಿ ಬರೋಣ ಎಂದೆ. ಈ ಸೂಚನೆ ನನ್ನ ಬಾಲ್ಯ ಸ್ನೇಹಿತ ರಾಮುನೆ ಕೊಟ್ಟಿದ್ದ. ರಾಮುನ ಮನೆಯಲ್ಲಿ ಸ್ನಾನ, ತಿಂಡಿ ಮುಗಿಸಿ ಮೊದಲು ಸರೋಜನ ಮನೆಗೆ ಹೋದೆವು. ದಾರಿಯಲ್ಲಿ ಸಿಗುವ ಮೊದಲ ಮನೆಯದು.

ಇಪ್ಪತ್ತು ವರ್ಷದಲ್ಲಿ ದೇಶ ಎಂತಹ ಪ್ರಗತಿ ಸಾಧಿಸಿದೆ ಎಂದು ಹೇಳ ಬೇಕಾದರೆ ಸರೋಜಳ ಮನೆಯೇ ಸಾಕ್ಷಿ. ಗಂಡ ರಿಟೈರ್ ಆದ ಮೇಲೆ ಮನೆಯನ್ನು ವಿಸ್ತಾರವಾಗಿ ಕಟ್ಟಿದ್ದಾನೆ. ಒಳ್ಳೆಯ ಹೊಳಪಿನ ನೆಲ. ಷೋ ಕೇಸ್ ತುಂಬಾ ಒಳ್ಳೆಯ ವಸ್ತುಗಳು. ಟಿ.ವಿ. ವಿ.ಸಿ.ಆರ್. ಉಳಿದ ಆಧುನಿಕ ಸಲಕರಣೆಗಳು, ಒಳ್ಳೆಯ ಕಲಾತ್ಮಕ ಕೂರುವ ಆಸನಗಳು. ನಿಯತ್ತಿನಿಂದ ದುಡಿದ ಹಣದ ಸದುಪಯೋಗ ಎದ್ದು ಕಾಣುತ್ತಿತ್ತು. ಮಗನ ಸರ್ಕಾರಿ ಕೆಲಸದಲ್ಲಿ ತುಂಬಾ ಗೌರವವಿದೆ. ವಸಂತನ ಮಾತು, ನಡತೆಯಲ್ಲೂ ಯಾವ ಬದಲಾವಣೆಯೂ ಇಲ್ಲ. ಅದೇ ಸರಳತೆ, ಪ್ರೀತಿ, ಆತ್ಮೀಯತೆ. ಇವರೆಲ್ಲರಿಗೂ ಶಾಂತಮ್ಮನ ಮಗ ಪ್ರಾಣೇಶ ಇನ್ನೂ ಜೀವನದಲ್ಲಿ ಒಳ್ಳೆಯ ಕೆಲಸ ಹಿಡಿದು ನೆಲಸಿಲ್ಲವಲ್ಲ ಎಂಬ ಚಿಂತೆ ಕೊರಗು. ಮಗನ ಪ್ರಗತಿಯ ಬಗ್ಗೆ ತುಂಬಾ ಹೆಮ್ಮೆ. ಶಾಂತಮ್ಮನ ಮಗನ ವಿಚಾರವಾಗಿ ಅನುಕಂಪ. ಒಳ್ಳೆಯ ಗೃಹಸ್ಥ ಲಕ್ಷಣ. ಮಿತ ಸಂಸಾರದ ಸುಖದ ಚಿತ್ರದ ಒಂದು ರೂಪ ಒಂದು ಮಾದರಿ.

ನಂತರ ಶಾಂತಮ್ಮನ ಮನೆಗೆ ಹೋದೆವು. ಶಾಂತಮ್ಮ ಶಾಂತಮ್ಮನ ಗಂಡ. ಅವರ ಮನೆಯ ಯಾವ ವಸ್ತುವಿಗೂ ವಯಸ್ಸು ಪರಿಣಾಮ ಮಾಡಿಲ್ಲ. ತಲೆಗಳು ಮಾತ್ರ ಉಪ್ಪು ಮಿಶ್ರಿತ ಮೆಣಸಿನ ಪುಡಿಯಂತೆ ಕಾಣುತ್ತಿದೆ. ಐದು ಮಕ್ಕಳ ತಂದೆ ನಿವೃತ್ತರಾಗಿದ್ದರೂ ಬೇರೊಂದು ಕಡೆ ಕೆಲಸ ಮಾಡುತ್ತಿದ್ದಾರೆ. ಅವರನ್ನು ನೋಡಿದಾಗ '' To be poor and Independent is very nearly an impo sibility '' ಎಂಬ ಮಾತು ಹೇಗೆ ಕೆಲಸ ಸಂಸಾರಗಳಿಗೆ ಅನ್ವಯವಾಗುವುದಿಲ್ಲ ಎಂಬುದು ಅಂದು ತಿಳಿಯಿತು.

ಅಲ್ಲಿದ್ದ ನಾಲ್ಕು ದಿನಗಳಲ್ಲಿ ವಸಂತ ಮತ್ತು ಪ್ರಾಣೇಶ ನನ್ನನ್ನು ಬಿಟ್ಟಿರದೇ ಇದ್ದರು. ವಸಂತನ ಅಧ್ಯಯನ, ಅವನ ಅಚ್ಚುಕಟ್ಟು ಮಿತ ಭಾಷತ್ವ ಪ್ರಾಣೇಶನ ಅರಳು ಹುರಿದಂತಹ ಮಾತು, ಅವನ ಸಿನೆಮಾ ಪ್ರಪಂಚದ ಜ್ಞಾನ, ಅವರೂ ಹಾಡುವ ಕಲೆ, ರಫಿಯಿಂದ ಕಿಶೋರ್‌ರವರೆಗೆ ಎಲ್ಲ ಗಾಯಕರು ಅವನ ಕಂಠದಲ್ಲಿ, ಅವನ ಇಚ್ಛೆಗೆ ತಕ್ಕಂತೆ ಹಾಡುವುದನ್ನು ಕಂಡೆ. ಪ್ರಾಣೇಶ ಹಾಡಿದನೆಂದರೆ ನೀವು ಆ ಚಿತ್ರವನ್ನು ನೋಡಿದ್ದರೆ ನಿಮಗೆ ಆ ಚಿತ್ರದ ಯಥಾವತ್ ದೃಶ್ಯ ಕಣ್ಣಿಗೆ ಕಟ್ಟಲೇ ಬೇಕು.ನಿಮ್ಮ ಕಿವಿಗೆ ಅದೇ ಇಂಪನ್ನು ಸವಿಯಲೇ ಬೇಕು. ಒಳ್ಳೆಯ ಹಾಡುಗಾರ. ಆದರೆ ಇನ್ನೂ ಬಿ.ಎಸ್. ಮುಗಿದಿಲ್ಲ. ಕೆಲಸ ಸಿಕ್ಕಿಲ್ಲ. ಅವನಿಗೆ ಏನಾದರೂ ಕೆಲಸ ಕೊಡಿಸುವ ಸನ್ನಾಹದಲ್ಲಿ ವಸಂತನಿದ್ದಾನೆ. ಪ್ರಾಣೇಶನು ಮಾತ್ರ ತನ್ನ ನೋವನ್ನು ಸ್ವಲ್ಪವೂ ತೋರಗೊಡದೆ ಮುಖೇಶ ಹಾಡಿರುವ ದುಃಖ ಭರಿತ ಹಾಡನ್ನು ಹಾಡುತ್ತಾನೆ. ಕೇಳಿದವರಿಗೆ ಕರುಳು ಕತ್ತರಿಸಿ ಬರುವಂತೆ. ಇವರಿಬ್ಬರೂ ಇಂದು ವಿದ್ಯೆಯಲ್ಲಿ, ಸಂಪತ್ತಿನಲ್ಲಿ, ಎರಡು ವಿರುದ್ಧ, ಧೃವಗಳಲ್ಲಿದ್ದಾರೆ. ಆದರೂ ಇದು ಅವರ ಸ್ನೇಹಕ್ಕೆ ಕುಂದು ತಂದಿಲ್ಲ. ವಸಂತನ ಪ್ರಗತಿ ಕಂಡ ಶಾಂತಮ್ಮನಿಗೆ ಇಲ್ಲದ ಸಂಭ್ರಮ. ಆದರೆ ಮಗ ಪ್ರಾಣೇಶನ ಬಗ್ಗೆ ಕೊರಗು. ನಿರಂತರ.

ನಾಲ್ಕು ದಿನ ಕಳೆದು ಹೊರಟೆವು. ಮತ್ತೆ ನಿಲ್ದಾಣಕ್ಕೆ ವಸಂತ ಅವನ ಭಾವೀ ಪತ್ನಿ ಪ್ರಾಣೇಶ ಬಂದರು. ಇದೇ ನಿಲ್ದಾಣದಲ್ಲಿ ಇಪ್ಪತ್ತು ವರ್ಷಗಳ ಹಿಂದೆ 'ಟಾಟಾ' ಹೇಳಿದ ಆ ಹುಡುಗರೆ ಇಂದು ಯುವಕರಾಗಿ ನಿಂತಿದ್ದಾರೆ, ಪ್ರಾಣೇಶನಿಗೆ ತನ್ನ ಕೆಲಸದ ಚಿಂತೆಯಿಲ್ಲ, ಬದಲು ನಾಳೆಯ ವಸಂತನ ಮದುವೆಯ ದಿನದ ಸಂಗೀತ ಕಾರ್ಯಕ್ರಮದ ಬಗ್ಗೆ ಚಿಂತೆಯಿದೆ. ಅದನ್ನು ನನ್ನ ಹತ್ತಿರ ಹೇಳಿದ,

ನಾವು ಬೆಂಗಳೂರಿಗೆ ಬಂದಾಗ ಬೆಳಿಗ್ಗೆ 6-10, ಅಂದೇ ರಾಜೀವ ಹತ್ಯೆಯ ಸಮಾಚಾರ ಬಂದಿರುವುದು. ಹೀಗಾಗಿ ಮನೆಗೆ ಹೋಗಲು ರಿಕ್ಷಾ ಸಿಗುತ್ತಿಲ್ಲ, ಬೆಂಗಳೂರು ಗಂಭೀರವಾಯಿತೆಂದರೆ ನಮ್ಮ ಆಟೋರವರು ದೇವತೆಗಳಾಗುತ್ತಾರೆ. ಅವರು ಹೇಳಿದ್ದೇ ಮಾತು, ಅವರು ಕೇಳಿದ್ದೇ ದರ. ಅವರು ಕಡೆ ನೀವು ಹೋಗ ಬೇಕು. ನೀವು ಕರೆದ ಕಡೆ ಅವರು ಬರುವುದು ಅವರ ಕರ್ತವ್ಯಕ್ಕೆ ಕುಂದು. ಹೀಗಿ ರುವಾಗ ಇನ್ನೂ ರಾಜೀವ ಹತ್ಯೆ ಬಗ್ಗೆ ತಿಳಿಯದ ಅಮಾಯಕ ಆಟೋದವನೊಬ್ಬ ಸಿಕ್ಕ ನಾವು ಕರೆದ ಕಡೆ ಹೊರಟ. ನಾವು ಮನೆಗೆ ಬಂದು ತಲುಪಿದಾಗ ಅವನಿಗೆ ಹಣ ಕೊಡುತ್ತಾ ಹತ್ಯೆಯ ಬಗ್ಗೆ ಹೇಳಿದೆ. ಅವನು ಹಣ ಜೋಬಿಗೆ ಇಡುತ್ತಾ ಮತ್ತೊಮ್ಮೆ ಮೀಟರ್ ನೋಡುತ್ತಾ, ಮುಖವನ್ನು ಹುಳ್ಳಗೆ ಮಾಡಿಕೊಂಡವನೇ ಆಟೋ ಸ್ಟಾರ್ಟ್ ಮಾಡಿಕೊಂಡು ಹೊರಟು ಹೋದ.

ಒಳಗೆ ಬಂದರೆ ಮೊದಲನೇ ಮಗ ರೂಮಿನಲ್ಲಿ ಓದುತ್ತಿದ್ದ. ಮಗಳು ಇನ್ನೂ ಮಲಗಿದ್ದಳು. ಎರಡನೆಯವನು ಟೇಪ್‌ರೆಕಾರ್ಡರ್ ಹಾಕಿ ಕಿಶೋರನ ಹಾಡು ಕೇಳುತ್ತಾ ತಾನೂ ಹಾಡುತ್ತಾ ಕುಳಿತಿದ್ದ. ನನ್ನ ಮಗನ ಧ್ವನಿಯಲ್ಲೂ ಸಂಗೀತದ ಛಾಯೆಯನ್ನು ನಾನು ಕಂಡದ್ದು ಅದೇ ಮೊದಲು ಪ್ರಾಣೇಶ ಇದೇ ಹಾಡನ್ನು ನಿನ್ನೆ ಎಷ್ಟು ಚೆನ್ನಾಗಿ ಹಾಡಿದ್ದ ಎಂಬುದು ನೆನಪಾಗಿತ್ತು. ತಕ್ಷಣ ನನಗರಿವಿಲ್ಲದಂತೆ "ಬೆಳಿಗ್ಗೆ ಬೆಳಿಗ್ಗೆ ಓದೋದು ಬಿಟ್ಟು ಹಾಡು ಕೇಳ್ತಾ ಇದ್ದೀ" ಎಂದು ಅರಚಿದೆ. ಮಗ ಗಾಬರಿಯಾಗಿ ಅದನ್ನು ತಕ್ಷಣ ಆಫ್ ಮಾಡಿದ. ನನಗೇಕೋ ವಿಚಿತ್ರ ಕಸಿವಿಸಿ ಯಾಗಿತ್ತು.

ಮನೆಗೆ ಏನಾದರೂ ಪತ್ರಗಳು ಬಂದಿವೆಯೋ ನೋಡಿದೆ. ಒಂದು ಬ್ಯಾಂಕಿನ ನೋಟಿಸು, ಇನ್ನೊಂದು ಚಿಟ್‌ಫಂಡ್‌ನವರ ರಿಮೈಂಡರ್. ಮೂರನೆಯದು ಯಾವುದೋ ಟಿ.ವಿ. ಯನ್ನು ಹನ್ನೆರಡರಿಂದ ಮೂವತ್ತಾರು ಕಂತುಗಳಲ್ಲಿ ಕೊಡುವ ಕೃಪೆ ಮಾಡಿರುವು ದನ್ನು ಅತ್ಯಂತ ಆಕರ್ಷಕ ಕಾಗದದಲ್ಲಿ ಒಳ್ಳೆಯ ಶೈಲಿಯಲ್ಲಿ ಬರೆದಿದ್ದರು. "ನಿಮ್ಮ ಮನೆಗೆ ಈಗ ಬೇಕಾಗಿರುವುದು ಟಿ.ವಿ. ಒಂದೇ". ಎಂಬ ಮಾತು ಬೇರೆ. ನಾನು ಅದನ್ನು ಓದುತ್ತಿರುವುದನ್ನು ನನ್ನ ಎರಡನೇ ಮಗ ಕಾತರದಿಂದ ನೋಡುತ್ತಿದ್ದ, ಎಲ್ಲಾ ಓದಿದ ಮೇಲೆ ಅವನ ಮುಖವನ್ನು ಕಂಡು ಏಕೋ ಕೋಪ ಏರಿತ್ತು. "ನೀವು ಓದೋ ಹುಟ್ಟಿಗೆ ಟಿ.ವಿ. ಬೇರೆ ಕೇಡು," ಎಂದು ಕೂಗುತ್ತಾ ಅದನ್ನು ಹರಿದು ಹಾಕಿದೆ. ಮಗ ಅಲ್ಲಿಂದ ಕಂಬಿ ಕಿತ್ತ. ಅಂದು ದೇಶದಾತ್ಯಂತ ಶೋಕವಿದ್ದಂತೆ ನಮ

ಮನೆಯಲ್ಲೂ ಏನೋ ಗಂಭೀರ ಪರಿಸ್ಥಿತಿಯಿತ್ತು. ರಾತ್ರಿ ನನ್ನಾಕೆ "ನೀವು ಏದೋ ಹುಟ್ಟಿಗೆ ಟಿ.ವಿ. ತರದಿದ್ದರೂ ಬೇಡ ಆ ಮಗು ಎದುರಿಗೆ ಆ ಪತ್ರ ಹಾಗೆ ಹರಿದು ಹಾಕ ಬೇಕಿತ್ತಾ" ಎಂದಾಗ ನನ್ನ ವರ್ತನೆ ಸರಿಯಿರಲಿಲ್ಲ. ಎಂದೆನಿಸಿದರೂ ನಾನು ಏನೂ ಹೇಳದೆ ಮಲಗಿದೆ.

"1994ರ ನವೆಂಬರ್ ಒಂದರಂದು ನಮ್ಮ ಮೊಮ್ಮಗನಿಗೆ ನಾಮಕರಣ ನೀವು ಬರಲೇ ಬೇಕು. ನೀವು ಸಾಹಿತ್ಯ ಪ್ರಿಯರು. ಮೊಮ್ಮಗನಿಗೆ ನಾಲ್ಕಾರು ಉತ್ತಮ ಹೆಸರುಗಳನ್ನು ತಿಳಿಸಿ" ಎಂದು ಸರೋಜಮ್ಮನ ಗಂಡ ಪತ್ರ ಬರೆದಿದ್ದರು. ಮನೆಯ ವರೆಲ್ಲ ಬನ್ನಿ ಎಂದೂ ಕರೆದಿದ್ದರು. ನನ್ನಾಕೆ "ನೀವೊಬ್ಬರೇ ಹೋಗಿ ಬನ್ನಿ ಇವನದು II ಪಿ. ಯು. ಸಿ. ಟ್ಯೂಷನ್ ಇನ್ನೊಬ್ಬನದು 10th ನಲ್ಲಿ ಟೆಸ್ಟ್ ಇದೆ ಎಂತೆ. ನಾ ಬರೋ ಹಾಗಿಲ್ಲ" ಎಂದಳು. ನಾನೂ ಹೂಂ ಅಂದೆ. ಒಬ್ಬರ ರೈಲ್ವೆ ಖರ್ಚು ಉಳಿಯಿತು ಎಂದು ಕೊಂಡೆ. ಇಂತಹ ಲಾಭಕ್ಕೆ ಅರ್ಥಶಾಸ್ತ್ರದಲ್ಲೂ ಏನೋ ಅನ್ನುತ್ತಾರೆ ಎಂದು ಜ್ಞಾಪಿಸಿಕೊಂಡೆ. ನೆನಪಾಗಲಿಲ್ಲ.

ನಿಲ್ದಾಣದಲ್ಲೂ ವಸಂತನೇ ಸಿಕ್ಕ ಪ್ರಾಣೇಶ ಕಾಣಲಿಲ್ಲ. 'ಎಲ್ಲಿ' ಎಂದರೆ 'ಅವನು ಮನೀಲಾಕ್ಕೆ ಹೋಗಿದ್ದಾನೆ' ಎಂದ. ನನಗೆ ಅವನ ಮಾತು ಅರ್ಥವಾಗಲಿಲ್ಲ. ಮತ್ತೆ ಎಲ್ಲಿಗೆ ಎಂದೆ. ಅವನು 'ಮನೀಲಾಕ್ಕೆ' ಎಂದ. ಹೊರದೇಶಕ್ಕೆ ಹೋಗಿದ್ದಾನೆ ಎಂಬುದನ್ನು ಖಾತರಿ ಮಾಡಿಕೊಂಡು 'ಏನು ಕೆಲಸ" ಎಂದೆ. "ಅವನೀಗ ಹಲವಾರು ಚಾನಲ್‌ಗಳಲ್ಲಿ ಕೆಲಸ ಮಾಡುತ್ತಿದ್ದಾನೆ' ಹಾಗಾಗಿ ತುಂಬಾ ದೇಶ ತಿರುಗುತ್ತಾನೆ" ಎಂದ. "ಚಾನಲ್ ಎಂದರೆ" ಎಂದೆ. "ಮನಿಲಾದಿಂದ ಒಂದು ಚಾನಲ್ ಇದೆ" "ಅದೇ ಅವನು ಬರೀ ಬಿ. ಎಸ್. ಸಿ. ಅಲ್ಲವಾ ಅವನ್ಯಾವಾಗ ಸಿವಿಲ್ ಇಂಜಿನಿಯರ್ ಮಾಡಿ ಕೊಂಡ".

"ಅಲ್ಲಾ ಮಾವ ಆ ಚಾನೆಲ್ ಅಲ್ಲ ಇದು. ಟಿ.ವಿ. ಚಾನಲ್‌ಗಳು "ಅಂದರೆ ನಮ್ಮ ದೂರದರ್ಶನವನ್ನು ಸೇರಿದನೋ ?"

"ಅಲ್ಲ ಮಾವ ಈಗ ನಮ್ಮ ಪ್ರಾಣೇಶನ ಟೆಲಿಕಾಸ್ಟ್ ಎಲ್ಲರಿಗೂ ಗೊತ್ತಾಗಿ ಅವನು ಬೇರೆ ಬೇರೆ ಟಿ. ವಿ. ಕಂಪನಿಯವರ ಕಾರ್ಯಗಳನ್ನು ನಡೆಸುತ್ತಾನೆ. ಇವನು ಮೊದಲು ಮೊದಲು ಯಾವುದಾದರೂ ಸ್ಪರ್ಧೆಯಲ್ಲಿ ಕಾಂಪೀಟ್ ಮಾಡ್ತಾ ಇದ್ದ.

ಬಲೇ ದೊಡ್ಡ ಪ್ರೈಜ್‌ಗಳೇ ಬರ್ತಾ ಇದ್ದವು. ಈಗ ಅವನೇ ಬೇರೆಯವರಿಗೆ ಪ್ರೈಜ್ ಕೊಡುವ ಸ್ಥಾನದಲ್ಲಿದ್ದಾನೆ.

ದಾರಿಯಲ್ಲಿ ಬರೀ ಪ್ರಾಣೇಶನ ಮಾತೇ ಆಡುತ್ತಾ ಅವರ ಮನೆಗೆ ಬಂದೆ. ಸರೋಜ ಅಜ್ಜಿಯಾಗಿರೊ ಸಂಭ್ರಮದಲ್ಲಿದ್ದಳು. ಅದೇ ಆತ್ಮೀಯತೆಯಿಂದ ಕಂಡಳು ಮೊದಲು ಮೊಮ್ಮಗನ ಬಗ್ಗೆ ನಂತರ ವಸಂತನ ಬಗ್ಗೆ ನಂತರ ಮತ್ತೆ ಪ್ರಾಣೇಶನ ಬಗ್ಗೆ ಪ್ರಾಣೇಶನ ಗುಣಗಾನಕ್ಕೆ ಎದುರಿಗಿದ್ದ ಶಾಂತಮ್ಮನೇ ಸಂತೋಷ ಪಡಬೇಕು ಅಂತಹ ಗುಣಗಾನವಾಗಿತ್ತು. ಯಾವುದೋ ಟಿ. ವಿ. ಸ್ಪರ್ಧೆಯಲ್ಲಿ ಮೊದಲು 1000 ರೂಪಾಯಿಯ ಬಹುಮಾನ ಬಂತಂತೆ, ಸರಿ ಮುಂದಿನವಾರ ಮತ್ತೆ ಯಾವುದೋ ಬಹುಮಾನದ ಹಣ, ವಾಷಿಂಗ್ ಮೆಷಿನ್, ಮ್ಯೂಸಿಕ್ ಸಿಸ್ಟಮ್, ಹೀಗೆ ವಾರ ಕೊಂದು ಬಹುಮಾನ, ನಗದು ರೂಪದಲ್ಲೋ ಒಳ್ಳೆಯ ಬಟ್ಟೆಯ ರೂಪದಲ್ಲೋ ಒಂದು ವಾರದ ಪ್ರಯಾಣಕ್ಕೋ ಹೀಗೆ ಅವನ ಪ್ರಗತಿಯ ವಿವರ ನಡೆದಿತ್ತು.

ಸರೋಜಳ ಮನೆ ಬಿಟ್ಟು ಶಾಂತಮ್ಮನ ಮನೆಗೆ ಬಂದಾಗ ಸಂಜೆ ಆಯಿತು. ನನ್ನನ್ನು ಕರೆದುಕೊಂಡು ಹೊರಟ ಶಾಂತಮ್ಮನ ಗಂಡ ನಾನು ನಿತ್ಯ ಹೊರಡುತ್ತಿದ್ದ ದಾರಿ ಹಿಡಿಯದೆ ಬೇರೆ ಕಡೆ ತಿರುಗಿದ್ದು ಕಂಡು "ಏನು ಈ ಕಡೆಗೆ" ಎಂದೆ. ಈ ಮನೆ ಇಲ್ಲೆ ಮಾಡಿದ್ದೀವಿ. ಎಂದರು. ಅವರು ಕರೆದು ತಂದ ಮನೆಗೆ ನಾನು ಹೋದೆ. ಅವನ ಮನೆಯ ಒಳಗೆ ಹೋಗುತ್ತಿದ್ದಂತೆ ದ್ವಾರಕೆಗೆ ಬಂದ ಕುಚೇಲನಂತಾದೆ. ಒಂದು ಮನೆ, ಅದರೊಳಗಿನ ಅಂದ ಚೆಂದ, ಒಂದು ಸಿನಿಮಾ ಸೆಟ್ ತರಹವಿದೆ, ಮಗನಿಗೆ ಬಂದಿರುವ, ಬರುತ್ತಿರುವ ಪ್ರೈಜ್‌ಗಳನ್ನು ಮನೆಯೆಲ್ಲಲ್ಲೂ ತುಂಬಿದ್ದಾರೆ. ಶಾಂತಮ್ಮ ಹೇಳಿದ ಪ್ರಕಾಶ ನಾನು ಬರುತ್ತಿರುವ ಸಮಾಚಾರ ಪ್ರಾಣೇಶನಿಗೆ ತಿಳಿದಿದೆ, ಆಗ ತಾನಿರುವುದಿಲ್ಲವಲ್ಲ. ಎಂದು ತುಂಬಾ ಒದ್ದಾಡಿಕೊಂಡನಂತೆ ಹಾಗೆಂದು 'ನಿನ್ನ ಫೋನ್ ಮಾಡಿದ್ದ' ಎಂದಾಗ ನಾನು ಫೋನ್ ಹುಡುಕುತ್ತಾ ಇದ್ದೆ.

ಅಲ್ಲೀ ಪಕ್ಕದ ಒಂದು ಟೀಪಾಯ್ ಮೇಲೆ ಒಂದು ವಿಚಿತ್ರ ಆಕಾರದ ಫೋನ್ ಕುಳಿತಿತ್ತು. ಪಕ್ಕದಲ್ಲಿ ಕಾರ್ಡ್‌ಲೆಸ್ ರಿಸೀವರ್ ಇದೆ. ಶಾಂತಮ್ಮ ಮಾತು ಮುಂದು ವರೆಸಿ ಹೇಳಿದಳು. ಇವತ್ತು ರಾತ್ರಿ ನಿನಗಾಗಿ ಫೋನ್ ಮಾಡುತ್ತಾನೆ. ಮಾತನಾಡು ಬಲೆ ಸಂತೋಷ ಅವನಿಗೆ ನಿನ್ನ ಹತ್ತಿರ ಮಾತನಾಡೋದು ಅಂದ್ರೆ ಜೊತೆ ಮಾತ ನಾಡುವಾಗ ಬೇಗ ಮದುವೆ ಮಾಡಿಕೋ ಎಂತ ಹೇಳೊ ನಿನ್ನ ಮಾತು ಕಂಡರೆ ಅವ

ನಿಗೆ ಬಹಳ ಗೌರವ" ಎರಡನೇ ಮಗನನ್ನು ಡೊನೇಷನ್ ಕೊಟ್ಟು ಟಿ. ಇ. ಗೆ ಸೇರಿಸಿದ್ದಾರೆ. ಮಗಳು ಈ ಮೊದಲಿಗಿಂತ ಮೈ ತುಂಬಿ, ಆರೋಗ್ಯದ ಕಳೆಯಿಂದ ಇನ್ನಿಬ್ಬರು ಮಕ್ಕಳು ಊರಿಗೆ ಹೋಗಿದ್ದವು. ಈ ವೇಗೆ ಪ್ರಾಣೇಶ ಭಾಗವಹಿಸಿದ್ದು ಅವನೇ ನಿಭಾಯಿಸಿದ ಹಲವಾರು ಟಿ. ವಿ. ಕಾರ್ಯಕ್ರಮದ ವಿಡಿಯೋ ಹಾಕಿ ತೋರಿಸಿದರು. ಪ್ರತಿಯೊಂದು ಸ್ಪರ್ಧೆಯಲ್ಲೂ ಅವನೇ ಮುಂದುವರೆದಿದ್ದು- ಬಹುಮಾನಗಳ ಮೇಲೆ ಬಹುಮಾನ, ಇಷ್ಟಾಗಿ ಪ್ರಾಣೇಶನ ತಮ್ಮ ತೋರಿಸಿದ್ದು ಕೇವಲ ಆಯ್ದ ಭಾಗವನ್ನು ಮಾತ್ರ. ಅಷ್ಟಕ್ಕೆ ಎರಡು ಗಂಟೆಯಾಗಿತ್ತು. ರಾತ್ರಿ ಒಂಭತ್ತಕ್ಕೆ ಶಾಂತಮ್ಮನ ಗಂಡ ಬಂದರು ಪ್ರವಚನಕ್ಕೆ ಹೊರಟಿದ್ದರಂತೆ ನಾವು ವಿಡಿಯೋ ನೋಡುವವರಲ್ಲಿ ಮಗ್ನರಾಗಿದಾಗ ಅವರು ಹೊರ ಹೊರಟಿದ್ದನ್ನು ನಾವು ಗಮನಿಸಲೇ ಇಲ್ಲ. ಊಟ ಮುಗಿದಾಗ ಹತ್ತು ಗಂಟೆ ಹತ್ತು ಹತ್ತಕ್ಕೆ ಫೋನ್ ಬಂತು. ಎರಡನೆ ಮಗನು ಎತ್ತಿಕೊಂಡ. ಮೊದಲು ಅವನು, ನಂತರ ಅವನ ತಂಗಿ, ನಂತರ ಶಾಂತಮ್ಮ ನಂತರ ಶಾಂತಮ್ಮನ ಗಂಡ ಎಲ್ಲರೂ ಮಾತನಾಡಿದ ಮೇಲೆ ಕಾರ್ಡ್‌ಲೆಸ್ ರಿಸೀವರ್ ನನ್ನ ಕೈಗೆ ಬಂತು. ಎಂತಹ ಪ್ರೀತಿಯ ಮಾತು ಅವನದು. ಹುಡುಗ ಏನೂ ಬದಲಾಗಿಲ್ಲ. ಎಂದುಕೊಂಡೆ ಹಾಗೆ ಮಾತನಾಡುತ್ತ ಇರುವಾಗ ಶಾಂತಮ್ಮ 'ನಿನಾದರೂ ಹೇಳು ಈಗಲಾದರೂ ಮದುವೆ ಆಗಲಿ ಎಂದು ನಿನ್ನ ಮಾತಿಗೆ ಬೆಲೆ ಕೊಡ್ತಾನೆ ಎಂದಾಗ ನಾನು ಹೂಂ ಎಂದು "ಪ್ರಾಣೇಶ ಯಾವಾಗ ನಿನ್ನ ಮದುವೆ ಹೇಳು ಎಂದೆ ಮಾವ ನೀವೆಲ್ಲಿಯಾದರೂ ಹೆಣ್ಣು ಹುಡುಕಿ ನನ್ನ ಕಡೆಯಿಂದ ಏನೂ ಡಿಮ್ಯಾಂಡ್ ಇಲ್ಲ ಎಂದ ಎಲ್ಲಾ ನಿಮಗೆ ಬಿಟ್ಟಿದ್ದು ಎಂದ. ಏನೋ ಒಂದು ತರಹದ ವಿಚಿತ್ರ ಖುಷಿಯಾಯಿತು, ಹುಡುಗಿ ಇವನ ತಿರುಗಾಟ ಇವನ ಬಿಜಿ ಷೆಡ್ಯೂಲ್‌ಗೆ ಅಡ್ಜಸ್ಟ್ ಆಗಬೇಕು ಅಷ್ಟೆ ಎಂದೆ ಇನ್ನೇನು ಮಾತು ಮುಗಿಸುವಾಗ ನಾನು ಗಡಿಯಾರ ನೋಡಿದೆ. ಆಗಲೇ ಹತ್ತು ಮೂವತ್ತು. ಇಪ್ಪತ್ತು ನಿಮಿಷ ಇಂಟರ್‌ನ್ಯಾಷನಲ್ ಕಾಲ್ ಆಗಿದೆಯಲ್ಲ ಎಂದುಕೊಂಡು 'ಅಯ್ಯೋ ಪ್ರಾಣೇಶ ಇಪ್ಪತ್ತು ನಿಮಿಷ ಮಾತಾಡ್ತಾಯಿದ್ದೀಯಲ್ಲಾ ಬಿಲ್ಲು ಎಷ್ಟಿರಬಹುದು ಎಂದೆ "ಬಿಡಿ ಮಾವ ಅಬ್ಬಬ್ಬಾ ಎಂದರೆ ಆರುನೂರು ರೂಪಾಯಿ ಆಗಬಹುದು ಬಿಡಿ. ಅತ್ತೆಗೆ ನನ್ನ ನಮಸ್ಕಾರ ಹೇಳಿ ನಿಮ್ಮ ಮಗನಿಗೆ ಮೆರಿಟ್‌ಸೀಟ್ ಸಿಗದೆ ಇದ್ದರೆ ಡೊನೇಷನ್ ಬಗ್ಗೆ ಯೋಚನೆ ಮಾಡಬೇಡಿ ನಾನಿದ್ದೇನೆ, ಎಂದು ಹೇಳಿ ಮಾತು ಮುಗಿಸಿದ.

ಮಾತು ಮುಗಿಸಿ ಈ ಕಡೆ ನೋಡಿದರೆ ಎಲ್ಲರೂ ನನ್ನನ್ನು ನೋಡುತ್ತಿದ್ದಾರೆ! "ಶಾಂತಮ್ಮನ ಮಗ ಮದುವೆಗೆ ಒಪ್ಪಿದ್ದಾನೆ. ಅವನ ಕೆಲಸಕ್ಕೆ ತಕ್ಕ ಹುಡುಗಿ ನೋಡು ಎಂದೆ. ಶಾಂತಮ್ಮ ಒಳಹೋಗಿ ಬಂದು ಪುಟ್ಟ ಪೆಟ್ಟಿಗೆ ತಂದು ಮುಂದಿಟ್ಟು 'ನೋಡು

ಬರೋ ಸೊಸೆಗೆ ಎಲ್ಲಾ ಮಾಡಿಸಿಟ್ಟಿದ್ದೀನಿ! ಎಂದು ಪೆಟ್ಟಿಗೆ ತೆರೆದಳು. ಅದರ ತುಂಬಾ ಚಿನ್ನದ ಆಭರಣ ಮತ್ತು ಉತ್ತಮ ರತ್ನಗಳ ಪ್ರಕಾಶವನ್ನು ನೋಡಿ ಆಶ್ಚರ್ಯ ಪಟ್ಟೆ. "ಎಲ್ಲಾ ಚೆನ್ನಾಗಿದೆ ಎಂದೆ". ಎಲ್ಲಾ ಅವನೇ ತಂದದ್ದು ನನಗೇಂತ. ಪ್ಯೂರ್ ಗೋಲ್ಡ್ ಕಣೋ, ನಾನು ಇವೆಲ್ಲಾ ಹಾಕೋತೀನ ಹೇಳು ಎಲ್ಲಾ ಅವನ ಹೆಂಡತಿಗೆ ಇರಲಿ ಎಂದು ಇಟ್ಟಿದ್ದೀನಿ' ಎಂದಳು,

ಅಂತೂ ಸರೋಜ ಮತ್ತು ಶಾಂತಮ್ಮನ ಮನೆಯ ಸ್ಥಿತಿಗತಿ ಅಜಗಜಾಂತರ. ಇಂದೂ ಹಾಗೇ ಇದೆ. ಅಂದಿನ ದೃಷ್ಟಿಯೇ ಬೇರೆ ಇಂದಿನ ದೃಷ್ಟಿಯೇ ಬೇರೆ.

ಬೆಂಗಳೂರಿಗೆ ಬಂದಾಗ ರೈಲು ಎರಡು ಗಂಟೆ ತಡವಾಗಿ ಬಂದಿತ್ತು. ಮನೆಗೆ ಬಸ್ಸಿನಲ್ಲೇ ಬಂದೆ. ಯಥಾ ಪ್ರಕಾರ ಮೊದಲನೆಯವನು ರೂಮಿನಲ್ಲಿ ಓದುತ್ತಿದ್ದ. ಎರಡನೆಯವನು 'ಟೇಪ್‌ರೆಕಾರ್ಡರ್'ನಲ್ಲಿ ಮುಖೇಶ್‌ನ ಹಾಡು ಕೇಳುತ್ತಿದ್ದ. ನನ್ನನ್ನು ಕಂಡು ತಕ್ಷಣ "ಟೇಪ್‌ರೆಕಾರ್ಡರ್" ಆಫ್ ಮಾಡಿ ತಾನೂ ಹಾಡುವುದನ್ನು ನಿಲ್ಲಿಸಿದ. ನಾನು ರೂಮಿನಲ್ಲಿ ನನ್ನ ಸೂಟ್‌ಕೇಸ್ ಇಟ್ಟು "ಅವತ್ತು ಟಿ.ವಿ. ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಡತ್ತೇವೆ ಎಂದು ಬರೆದಿದ್ದರಲ್ಲ ಅದರ ಹೆಸರೇನು ಎಂದೆ. ಮೊದಲನೆಯವನು ಪುಸ್ತಕದಿಂದ ಕಣ್ಣು ಕಿತ್ತು ನನ್ನ ಕಡೆ ನೋಡುವುದರೊಳಗೆ ಎರಡನೆಯವನು ಆ ಕಂಪೆನಿಯ ಹೆಸರು, ಅದರ ವಿಳಾಸ, ಮತ್ತು ಅವರು ಮಾಡುವ ಟಿ.ವಿ.ಗಳ ತಯಾರಕರ ಹೆಸರನ್ನು ನನ್ನ ಮುಂದೆ ಪಟ ಪಟ ಹೇಳಿದ. ನಾನೊಮ್ಮೆ ಅವನನ್ನು ನೋಡಿ ಸ್ನಾನ ಮಾಡಿ ಬರ್‍ತಿನಿ ತಿಂಡಿ ತಿಂದ ಮೇಲೆ ಹೋಗಿ ಟಿ.ವಿ. ತರೋಣ ಎಂದೆ. ನನ್ನ ಮಾತು ಕೇಳಿಯೊ ಅಥವಾ ಆಗಿನ್ನು ಎಚ್ಚರವಾಯಿತೋ ನನ್ನ ಮಗಳು ತಟಕ್ಕೆಂದು ಎದ್ದಳು. ನಾನು ಬಚ್ಚಲು ಮನೆ ಕಡೆ ಹೊರಟರೆ ನನ್ನಾಕೆ ನನ್ನ ಹಿಂದೆ ಬಂದು ನನ್ನನ್ನು ಒಮ್ಮೆ ಸರಿಯಾಗಿ ನೋಡಿ 'ಏನಾಗಿದೆ ನಿಮಗೆ' ಎಂದಾಗ ಏನೂ ಉತ್ತರ ಹೇಳದೆ ಬಾಗಿಲು ಮುಚ್ಚಿಕೊಂಡೆ.

## ಹಾದಿಯಲ್ಲಿ ಕೇಳಿಸಿದ್ದು :

"ಏನ್ ಗುರೂ, ನಮ್ಮ ದೇಶದಲ್ಲಿ ಪ್ರತಿವರ್ಷ ಸಂದಾಯ ಆಗೂ ಲಂಚ ಎಷ್ಟಿರ ಬೇಕು ಅಂತೀನಿ ?"

"ಅದೇನ್ ಸುಲಭಮರಿ. ಈ ಭ್ರಷ್ಟಾಚಾರ ಇಲ್ದಿದ್ರೆ ನಾವೂ ಕೊರಿಯಾ ದೇಶದ ತರಹ ಆಗ್ತಿದ್ವಿ ಕೊರಿಯಾ ಜಿ. ಎನ್. ಪಿ. ಯಿಂದ ನಮ್ಮ ಜಿ. ಎನ್. ಪಿ. ಕಳೆದ್ರೆ ಮುಗೀತು. ವಾರ್ಷಿಕ ಲಂಚ ಎಷ್ಟು ಅಂತ ತಿಳಿಯುತ್ತೆ."

# ನೆಟ್‌ವರ್ಕ್, ಇ-ಮೇಯ್ಸ್: ಬುರಖಾ ಮತ್ತು ಚರಖಾ

--ನಂದಿನಿ ಕಾಪಡಿ

ನಮ್ಮ ಪಕ್ಕದ ಮನೆಯ ಸಾಂಬಶಿವನ್. ನಿವೃತ್ತರಾಗಿ ಎರಡು ವರ್ಷಗಳಾಗಿವೆ. ಯಾರು ಯಾರಿಗೆ ವೇಳೆಯಿಲ್ಲವೋ ಅವರೆಲ್ಲಾ ತಮ್ಮ ತಮ್ಮ ದೊಡ್ಡ, ಚಿಕ್ಕ ಕೆಲಸ ಗಳನ್ನು ಸಾಂಬಶಿವನ್‌ಗೆ ಹೇಳಿ ಬಿಡುತ್ತಾರೆ. ಪಾಪ ಸಾಂಬಶಿವನ್ ಚೂರೂ ಬೇಜಾರಿ ಲ್ಲದೆ, ಪರೋಪಕಾರದ ಮನೋಭಾವನೆಯಿಂದ ಜೆಳಿಗ್ಗೆ ರೇಷನ್ ಆಫೀಸು, ಮಧ್ಯಾಹ್ನ ಇಲೆಕ್ಟ್ರಿಸಿಟಿ ಆಫೀಸು, ಸಾಯಂಕಾಲ ಎದುರು ಮನೆಯ ಯು.ಕೇಜಿ ಮಗುವಿಗೆಂದು ಕಂಪ್ಯೂಟರಿನ ಪಠ್ಯ ಪುಸ್ತಕ ತರಲು ಪುಸ್ತಕದ ಅಂಗಡಿ ಹೀಗೆ ಓಡಾಡುತ್ತಲೇ ಇರು ತ್ತಾರೆ. ಒಮ್ಮೊಮ್ಮೆ ಏನೂ ಕೆಲಸವಿಲ್ಲದಾಗ ನಮ್ಮ ಹತ್ತಿರ ಬಂದು ಹರಟುತ್ತಾರೆ. ಹೀಗೇ ಒಂದು ಸಾಯಂಕಾಲ ನಮ್ಮ ಮನೆಗೆ ಬಂದಿದ್ದರು...

"ಕೇಳಿದ್ರಾ ಸಮಾಚಾರಾನಾ? ಭಾರತ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕೇ ಬಿಡ್ತಂತೆ ! ನೋಡ್ತಾ ಇರಿ ಇನ್ನು ಮೇಲೆ, ನಮ್ಮ ನಾಯಿಗೆ ತೌಡು ಬೇಕಾದರೂ ನೂರು ರೂಪಾಯಿ ಸುರಿಯ ಬೇಕು. ನನ್ನ ವಾಯುವಿನ ಮಂಡಿಗೆ ಹಚ್ಚಲು ಬೇವಿ ನೆಣ್ಣೆ ಬೇಕಾದರೆ ಸಾವಿರ ರೂಗಳು ಕೊಡ ಬೇಕು. ಅಲ್ಲಾರೀ ನಮ್ಮ ದೇಶದ ತತ್ವ ಗಳು ಎಲ್ಲಿ ಹೋದವು? ನೀವು ಏನೇ ಹೇಳಿ ಇವೆಲ್ಲಾ ಒಪ್ಪಂದ, ಕರಾರಿನ ಬದಲು ಗಾಂಧೀಜಿ ಹೇಳಿದ ಹಾಗೆ ಚರಖಾ ಎಲ್ಲರಿಗೂ ಹಂಚಿ ಖಾದಿ ವಸ್ತ್ರದ ಪ್ರಗತಿಗೆ ಸರ್ಕಾರ ಮನ್ನಣೆ ಕೊಡ ಬೇಕು! ಗ್ಯಾಟ್ ಅಂತೆ ಗ್ಯಾಟ್" ಎಂದರು.

ಅಷ್ಟರಲ್ಲೇ ನನ್ನ ಮೈದುನ ಮನೆಗೆ ಬಂದವನೇ "ಅತ್ತಿಗೆ ಇಂಗ್ಲೆಂಡ್ ಅಮೇ ರಿಕಾ ದೇಶಗಳ ತರಹವೇ ಇಲ್ಲೂ ತೌಡಿನ ಬಿಸ್ಕೆಟ್‌ಗಳು ಸಿಗುತ್ತಿವೆ. ಇವತ್ತು ಡಿಪಾರ್ಟ್‌ಮೆಂಟಲ್ ಸ್ಟೋರಿಗೆ ಹೋಗಿದ್ದೆ ನೋಡಿ. ನಾನಾ ತರಹ ತೌಡಿನ ಬಿಸ್ಕೆ ಟ್ಟನ್ನು ಮುರಿದು ಹಾಲಿಗಿ ಹಾಕಿಕೊಂಡು ತಿನ್ನುತ್ತೇನೆ" ಎಂದ.

"ಕೇಳಿದ್ರಾ ಕೇಳಿದ್ರಾ, ನಾನು ಹೇಳಿದ್ದು ನಿಜವಾಯ್ತು ಬಿಡಿ. ನಾಯಿಗೆ ತೌಡು ಎಂದೆ, ಈಗ ಮನುಷ್ಯರೂ ತೌಡನ್ನು ತಿನ್ನುವ ಹಾಗಾಯಿತು. ಅಂದ ಹಾಗೆ ಆ ಬಿಸ್ಕೆಟ್‌ಗಳ ಬೆಲೆ ಏನಪ್ಪಾ" ಎಂದು ಕೇಳಿದರು ಸಾಂಬಶಿವನ್.

"ಹತ್ತು ರೂಪಾಯಿಗೆ ಐದು ಬಿಸ್ಕೆಟ್‌ಗಳು" ಎಂದ ಮೈದುನ.ತಲೆ ಚಚ್ಚಿ ಕೊಂಡರು ಸಾಂಬಶಿವನ್. ಅಷ್ಟು ಹೊತ್ತಿ ನಮ್ಮೆಜಮಾನರ ಆಗಮನವಾಯಿತು. ಸಾಂಬಶಿವನ್ ಅವರನ್ನು ಹಿಡಿದು ಕೊಂಡಿದ್ದರಿಂದ ನಾನು ಒಳಗೆ ಹೋದೆ. ಅರ್ಧ ಗಂಟೆಯ ನಂತರ ಹೊರಗೆ ಬಂದು ನೋಡಿದಾಗ ಸಾಂಬಶಿವನ್ ಹೇಳುತ್ತಿದ್ದರು. "ಎಲ್ಲವೂ ತಲೆ ಕೆಳಗು ಸ್ವಾಮಿ, ಎಲ್ಲವೂ ತಲೆ ಕೆಳಗು. ಈಗ ನೋಡಿ ಸ್ವದೇಶಿ ಹೋಗಿ ವಿದೇಶಿ ಬರುತ್ತಿದೆ... ಗಂಡಸರು ಕಿವಿಗೆ ರಿಂಗು ಹಾಕಿ ಕೊಂಡು, ಉದ್ದ ಕೂದಲು ಬೆಳೆಸಿ ಕೊಂಡು ಮನೆಯ ಕೆಲಸ ಮಾಡುತ್ತಾರೆ. ಹೆಂಗಸರು ತಲೆ ಕ್ರಾಪ್ ಮಾಡಿಸಿ ಕೊಂಡು, ಪ್ಯಾಂಟು ಶರ್ಟು ಹಾಕಿ ಹೊರಗೆ ಹೋಗಿ ದುಡಿಯುತ್ತಾರೆ... ಗಾಂಧೀಜಿ ಮೂಲೆಗೆ ಸೇರಿದ್ದಾರೆ. ಮೈಕೇಲ್ ಜ್ಯಾಕ್‌ಸನ್ ಮುಂದೆ ಬಂದಿದ್ದಾನೆ... ನಾಯಿಗಳು ಬ್ರೆಡ್ಡು ಬೆಣ್ಣೆ ತಿನ್ನುತ್ತಿವೆ, ಮನುಷ್ಯರು ತೌಡನ್ನು ತಿನ್ನುತ್ತಿದ್ದಾರೆ, ಎಲ್ಲವೂ ತಲೆ ಕೆಳಗು."

ಸಾಂಬಶಿವನ್ ವಾಪಸು ಹೋದಮೇಲೂ, ನಮ್ಮವರ ತಲೆಯ ಬಿಸಿ ಇಳಿಯ ಲಿಲ್ಲ... ತಮ್ಮ ತಂದಿದ್ದ ತೌಡಿನ ಬಿಸ್ಕೆಟ್ ನೋಡುತ್ತಾ "ಇವತ್ತು ಆಫೀಸಿನಲ್ಲಿ ಪಾರ್ಟಿ ಇತ್ತು. ಮೊಳಕೆ ಬರಿಸಿದ ಹೆಸರು ಕಾಳು. ಗೋಧಿ ಹುಲ್ಲಿನ ರಸ ಮತ್ತು ಬೆಲ್ಲ ತೌಡು ಬೆರಸಿ ಮಾಡಿದ ಗಂಜಿ ಕಣೆ. ಒಬ್ಬೊಬ್ಬರ ಹತ್ತಿರ ನೂರು ರೂಪಾಯಿ ಗಳನ್ನು ಚಂದಾಕ್ಕೆಂದು ಕಿತ್ತರು" ಎಂದು ಕೊಳ್ಳುತ್ತಾ ಒಳಗೆ ಹೋದರು...

ಮಾರನೆಯ ದಿನ ಯಾವುದೋ ಪುಸ್ತಕ ಕೇಳಲು ಕೃತ್ತಿಕಾ ಬಂದಳು, ಸಾಂಬ ಶಿವನ್‌ರ ಎರಡನೇ ಮಗಳು ಕೃತ್ತಿಕಾ, ಸುಮಾರು ಇಪ್ಪತ್ತೆರಡು ವರ್ಷಗಳ ತರುಣಿ. ತುಂಬಾ ಚೂಟಿ. ಪ್ರಖ್ಯಾತ ಕಂಪ್ಯೂಟರ್ ಕಂಪೆನಿಯಲ್ಲಿ ಈಗಷ್ಟೆ ಕೆಲಸಕ್ಕೆ ಸೇರಿ ಕೊಂಡಿದ್ದಳು. ನಾನು ಏನೋ ಮಾತನಾಡುತ್ತಾ ಯಾವುದೋ ಪತ್ರ ಹಿಂದಿನ ತಿಂಗಳು ಅಂಚೆಗೆ ಹಾಕಿದ್ದು ಈಗ ಬಂದು ತಲುಪಿರುವುದಾಗಿ ಹೇಳಿದೆ. "ಆಂಟಿ, ಇವೆಲ್ಲಾ ಸ್ವಲ್ಪ ದಿನಗಳಲ್ಲೇ ಹಳೆಯ ಮಾತಾಗುತ್ತವೆ. ಈಗ ಇ-ಮೇಯ್ಲ್ ಬಂದಿದೆ. ನಿಮ್ಮ ಕಂಪ್ಯೂಟರಿಗೂ ಬೇರೆ ಊರಿನಲ್ಲಿರುವ ನಿಮ್ಮ ತಂಗಿಯ ಕಂಪ್ಯೂಟರ್‌ಗೂ ಸಂಪರ್ಕ. ಫೋನಿನ ಮೂಲಕ ಮಾಡಿಸ ಬಹುದು. ಈಗ ನೀವು ನಿಮ್ಮ ಪತ್ರ ಇಲ್ಲಿ ಕೀ ಮಾಡಿದರೆ, ಆ ಕ್ಷಣವೇ ಆ ಕಡೆ ನಿಮ್ಮ ತಂಗಿಯ ಕಂಪ್ಯೂಟರಿನಲ್ಲಿ ಆ ಪತ್ರ ಬಂದು ಬಿಡುತ್ತದೆ" ಎಂದಳು.

ನನಗೆ ಚೂರೂ ಅರ್ಥವಾಗಲಿಲ್ಲ. ಕೃತ್ತಿಕಾ ಅಲ್ಲೇ ಬಿದ್ದಿದ್ದ ಪೇಪರಿನ ಮೇಲೆ ಬೇಗ ಬೇಗ ಏನೋ ಚಿತ್ರ ಬಿಡಿಸುತ್ತಾ "ಆಂಟಿ ಇದಕ್ಕೆ ನೋಡಿ. ನೆಟ್‌ವರ್ಕ್ ಅನ್ನುತ್ತಾರೆ. ಇಲ್ಲಿಂದ ಅಲ್ಲಿಗೆ ಸಂಪರ್ಕ ಸಾಧಿಸುವುದು ಈ ರೀತಿ ಲೋಕಲ್ ಏರಿಯಾ ನೆಟ್‌ವರ್ಕ್ ಈ ರೀತಿ......" ಹೀಗೆ ನೂರಾರು ವಿಷಯಗಳನ್ನು ತಿಳಿಸಿದಳು.

"ಚೂಟಿ ಹುಡುಗಿ ನೀನು ಕೃತ್ತಿಕಾ" ಎಂದೆ. ಮಣಿ ಸ್ಕೇಟಿನಲ್ಲಿ ಮಾತ್ರ ಕೂಡುವುದು, ಕಳೆಯುವುದು ಗೊತ್ತಿದ್ದ ನನಗೆ ಈ ನೆಟ್‌ವರ್ಕ್, ಇ-ಮೇಯ್ಲ್ ಎಲ್ಲಾ ಕೌತುಕವೇ !

"ಜ್ಯುರಾಸಿಕ್ ಪಾರ್ಕ್" ಚಿತ್ರ ನೋಡಲು ಹೋದೆವು. ಗತ ಕಾಲೀನ ಸರೀಸೃಪಗಳನ್ನು ಈ ಕಾಲದಲ್ಲಿ ಸೃಷ್ಟಿಸಿರುವ ಇಲೆಕ್ಟ್ರಾನಿಕ್ ಜಗತ್ತಿನ ಸೋಜಿಗದ ಬಗ್ಗೆ ಓದಿಯಾಗಿತ್ತು. ಚಿತ್ರ ಪ್ರಾರಂಭವಾಯಿತು. ಮುಂದಿರುವ ಖಾಲಿ ಎರಡು ಸೀಟುಗಳನ್ನು ದಂಪತಿಯೊಂದು ಬಂದು ಆಕ್ರಮಿಸಿ ಕೊಂಡಿತು. ಮುಸಲ್ಮಾನರಿರಬೇಕು. ಹೆಣ್ಣು ಬುರಖಾ ಧರಿಸಿತ್ತು, ಚಿತ್ರದ ಬೆಳಕಿನಲ್ಲಿ ಆ ಹೆಣ್ಣಿನ ಕೈ ಗಂಡಿನ ಕೈಯನ್ನು ಹಿಡಿದು ಕೊಂಡು ಕೂತಿದ್ದು ಕಾಣಿಸಿತು. ಒಂದು ಸನ್ನಿವೇಶ, ಟಿರೆನೋಸಾರಸ್ ಸರೀಸೃಪ ಹೊರಗೆ ಬಂದು ಮಕ್ಕನ್ನು ಆಕ್ರಮಿಸುವ ದೃಶ್ಯ. ನನ್ನ ಚಿಕ್ಕ ಮಗಳು ಹೆದರಿಕೊಂಡು 'ಆ' ಎಂದು ಕೂಗಿ ಬಿಟ್ಟಳು! ಎಲ್ಲರೂ ಹಿಂತಿರುಗಿ ನಮ್ಮತ್ತ ನೋಡಿದರು.

ಇಂಟರ್‌ವೆಲ್ ಹೊತ್ತಿಗೆ ಆ ಜೋಡಿ ಹೊರಲು ಹೋಗಿ ಬೇರೆ ಯಾರೋ ಇಬ್ಬರು ನಮ್ಮ ಮುಂದೆ ಕುಳಿತರು. "ಸಾಂಬಶಿವನ್ ಹೇಳಿದ್ದು ನಿಜ ಕಣ್ರಿ, ಈ ಪ್ರಪಂಚದಲ್ಲಿ ಎಲ್ಲವೂ ತಲೆ ಕೆಳಗು...ನೋಡಿ ಸರೀಸೃಪಗಳು ನಿಜವಾಗಿ ಬಿಟ್ಟವಲ್ಲ!" ಎಂದುಕೊಂಡು ನಾನು ಹೊರಗೆ ಬಂದೆ.

ಬಸ್ಸು ಹಿಡಿದು ಕೊಂಡು ಮನೆಗೆ ಬಂದೆವು. ನಾವು ಗೇಟನ್ನು ತೆಗೆಯುವುದಕ್ಕೂ, ಕೃತ್ತಿಕಾ ತನ್ನ ಕೈನೆಟಿಕ್ ಹೋಂಡ ನಮ್ಮ ಎದುರು ಮನೆಯತ್ತ ನಿಲ್ಲಿಸುವುದಕ್ಕೂ ಸರಿ ಹೋಯಿತು. "ಏನು ಆಂಟಿ, ಪಿಕ್ಚರಿಗೆ ಹೋಗಿದ್ರಾ ? ಎಂದವಳೇ ಕೃತ್ತಿಕಾ ಒಳಗೆ ಹೋದಳು.

ಆ ಬೀದಿ ದೀಪದ ಬೆಳಕಿನಲ್ಲೂ ಕೃತ್ತಿಕ ಕೈಲಿದ್ದ ಬಳೆ ಕಾಣಿಸಿ, ಈ ಬಳೆಯನ್ನು ನಾನು ಮೊದಲೆಲ್ಲಾದರೂ ನೋಡಿದ್ದೀನಿಯೇ ಎಂಬ ಸಂಶಯ ಬಂದಿತು. ತಲೆಯಲ್ಲಿ ಸಂಶಯದ ಕೀಟ ಕೆಲಸ ಪ್ರಾರಂಭಮಾಡಿತು,

ರಾತ್ರಿ ಮಲಗುವಾಗ ನಮ್ಮ ಯಜಮಾನರ ಹತ್ತಿರ ಸಂಶಯ ಹೇಳಿಕೊಂಡು "ಅಲ್ಲಾ ರೀ, ಇ-ಮೆಯಿಲ್ಸ್, ನೆಟ್‌ವರ್ಕ್ ಎಂದು ಮಾತನಾಡುವ ಹುಡುಗಿ, ಬುರ್ಖಾ ಧರಿಸಿದ್ದಿದರೂ ಹೇಗೆ ?" ಎಂದು ಕೇಳಿದೆ. ನಮ್ಮ ಯಜಮಾನರು ಥೇಟ್ ಸಾಂಬಶಿವನ್‌ರ ಧ್ವನಿಯಲ್ಲಿ "ಎಲ್ಲವೂ ತಲೆ ಕೆಳಗು...ಎಲ್ಲವೂ ತಲೆ ಕೆಳಗು" ಎಂದರು.

---

## ಬಿಟ್ಟು ಬಿಡು ಈ ಪ್ರಾಣೀನ

**ಎಸ್. ಪ್ರಕಾಶ್**

**ಓದುಗ :** ಯಾಕೆ ಬರೀತೀಯಾ ನೀನು ಕವನ ?
ಯಾಕೆ ಕೊರೀತೀಯಾ ನನ್ನ ಕಿವಿನಾ ?
ಹೇಳು, ಇದು ಸರೀನಾ ?

**ಕವಿ :** ನಾನು ಹೇಳೋದು ಮಾಡಿಕೊ ಮನನ
ಮನಃ ಶುದ್ಧ ಮಾಡೋದಿಲ್ಲ ನನ್ನ ಕವನ
ಆದರೂ ಕೊರೆದು ಕೊರೆದು ಕಿವೀನ
ತೆಗೆದು ಅದರ ಕೊಳೇನಾ
ಮಾಡತ್ತೆ ಕಿವಿ ಶುದ್ಧೀನಾ
ಸದಾ ನನ್ನ ಕವನ
ನಾನು ಮಾಡ್ತೀನಿ ಈ ಕೆಲಸಾನ
ಕೊಡಿಸಿ ತಿಂಡಿ ಕಾಫೀನಾ
ಹೇಳು, ಇದೇನು ಕಮ್ಮೀನಾ ?

**ಓದುಗ :** ನೀನು ಕವಿಯಿಲ್ಲವೋ ಕರ್ಣತಜ್ಞ ?
ನನಗೆ ಗೊತ್ತಿರಲಿಲ್ಲವೊ ನಾನು ಅಜ್ಞ
ಕರ್ಣನ ಹಾಗೆ ದಾನ
ಮಾಡ್ತೀನಿ ನನ್ನ ಕಿವೀನಾ
ತಗೊಂಡು ಹೋಗಿ ಎಲ್ಲೀಗಾನ
ಊದು ನಿನ್ನ ಶಂಖಾನ
ಆದರೆ ಪಂಚೆಯೊಡ್ಡಿ ಬೇಡಿಕೋತಿನಿ
ಹಿಂಡಬೇಡ ನನ್ನ ಜೀವಾನ
ಬಿಟ್ಟು ಬಿಡು ಈ ಪ್ರಾಣೀನ
ಬಿಟ್ಟು ಬಿಡು ಈ ಪ್ರಾಣೀನ
ಬಿಟ್ಟು ಬಿಡು ಈ ಪ್ರಾಣೀನ !

ಶುಭಾಶಯಗಳೊಂದಿಗೆ

# ಮಾಸ್‌ಕಾಟ್ ಆಗ್ರೋ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,
ಪೀಣ್ಯ ಇಂಡಸ್ಟ್ರಿಯಲ್ ಏರಿಯ,
ಬೆಂಗಳೂರು – 560 058
ದೂರವಾಣಿ: 395902 ತಂತಿ: 'ಮಾಸ್ ಕಾಟ್' ಟೆಲೆಕ್ಸ್ – 845-580

ಭತ್ತ, ಕಬ್ಬು ಮತ್ತು ಗೋಧಿಯ ಬೆಳೆಗಳಲ್ಲಿ
ಕಳೆ ನಿಯಂತ್ರಣ ಮಾಡುವುದಕ್ಕೆ
"ನಾಕ್ವೀಡ್" ಕಳೆನಾಶಕವನ್ನು ಉಪಯೋಗಿಸಿರಿ.

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.